



ಕರ್ನಾಟಕ ಸರ್ಕಾರ


# ಕರ್ನಾಟಕ ಕೃಷಿ ಬೆಲೆ ಆಯೋಗ

**(Karnataka Agriculture Price Commission)**

(ಆದೇಶ ಸಂಖ್ಯೆ: ಕೃಇ61ಕೃಎಇ2013, ಬೆಂಗಳೂರು, ದಿ: 31/01/2014)

# ಕರ್ನಾಟಕದಲ್ಲಿ ರೈತರ ಆದಾಯ ಹಾಗೂ ಕಲ್ಯಾಣ ವೃದ್ಧಿ
# ಕೃಷಿ ಬೆಲೆ ಆಯೋಗದ ಪ್ರಾಯೋಗಿಕ ಕಾರ್ಯಯೋಜನೆ

**ಡಿಸೆಂಬರ್ 2016**



# ಕರ್ನಾಟಕ ಕೃಷಿ ಬೆಲೆ ಆಯೋಗದ ತಂಡ

| | | |
|---|---|---|
| 1. | **ಡಾ. ಟಿ. ಎನ್. ಪ್ರಕಾಶ್ ಕಮ್ಮರಡಿ** | **ಅಧ್ಯಕ್ಷರು** |
| 2. | ಶ್ರೀ. ಹನುಮನಗೌಡ ಬೆಳಗುರ್ಕಿ, ರೈತ ಪ್ರತಿನಿಧಿ | ಸದಸ್ಯರು |
| 3. | ಶ್ರೀ. ಎಂ.ಮಹೇಶ್ವರ್ ರಾವ್, ಭಾ.ಆ.ಸೇ., ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ | ಸದಸ್ಯರು |
| 4. | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ | ಸದಸ್ಯರು |
| 5. | ಆಯುಕ್ತರು, ಕೃಷಿ ಇಲಾಖೆ | ಖಾಯಂ ಆಹ್ವಾನಿತರು |
| 6. | ನಿರ್ದೇಶಕರು, ಕೃಷಿ ಮಾರುಕಟ್ಟೆ ಇಲಾಖೆ | ಖಾಯಂ ಆಹ್ವಾನಿತರು |
| 7. | ನಿರ್ದೇಶಕರು, ತೋಟಗಾರಿಕೆ ಇಲಾಖೆ | ಖಾಯಂ ಆಹ್ವಾನಿತರು |
| 8. | ಆಯುಕ್ತರು, ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ | ಖಾಯಂ ಆಹ್ವಾನಿತರು |
| 9. | ಶ್ರೀ. ಬಿ.ವೈ. ಶ್ರೀನಿವಾಸ್, ನಿರ್ದೇಶಕರು, ಕೃಷಿ ಇಲಾಖೆ | ಸದಸ್ಯ ಕಾರ್ಯದರ್ಶಿಗಳು |
| 10. | ಡಾ. ಕೆ. ವಿ. ಮಹಾಬಲಗಿರಿಭಟ್, ಮುಖ್ಯ ಪ್ರಧಾನ ವ್ಯವಸ್ಥಾಪಕರು (ನಿವೃತ್ತ) ರಾಜ್ಯ ಕೃಷಿ ಮಾರಾಟ ಮಂಡಳಿ | ವಿಶೇಷ ಆಹ್ವಾನಿತರು |
| 11. | ಡಾ. ಎನ್. ವಿ. ಕಮಲಾ, ಉಪ ಕೃಷಿ ನಿರ್ದೇಶಕರು | ತಾಂತ್ರಿಕ ಅಧಿಕಾರಿಗಳು |

## ತಾಂತ್ರಿಕ ಸಿಬ್ಬಂದಿ

### ತಾಂತ್ರಿಕ ಸಲಹೆಗಾರರು

ಡಾ. ಕೆ. ಜೆ. ಪರಮೇಶ್ವರಪ್ಪ

ಡಾ. ಕೆ.ಎಸ್. ಜನಾರ್ಧನ್

### ತಾಂತ್ರಿಕ ಸಹಾಯಕರು

ಶ್ರೀ. ಹರ್ಷ ವಿ. ತೋರಗಲ್

ಶ್ರೀ. ಗಿರೀಶ್ ಪಿ. ಎಸ್.

ಶ್ರೀ. ಮಾಲಿ ಪಾಟೀಲ್ ವಿಜಯಕುಮಾರ್

ಕು. ಶಿಲ್ಪಶ್ರೀ ಜಿ.ಎಸ್.

ಕು. ಶ್ರುತಿ ಬಿ.ಎನ್.

### ಸಹಾಯಕರು

ಶ್ರೀ. ರವಿಸೂದನ್ (ಪ್ರದಸ)

ಶ್ರೀ. ಬಿ.ಸಿ. ಪ್ರಸಾದ್ (ಬೆ.ಗಾ.)

ಕು. ನೀರಜಾ ನಾಯಕ್ (ಆಪ್ತ ಕಾರ್ಯದರ್ಶಿ)

ಕು. ಲಾವಣ್ಯ ಆರ್. ಮತ್ತು ಶ್ರೀ. ಸಂದೀಪ ಆರ್. (ಸಹಾಯಕರು)

ಶ್ರೀ. ಎನ್.ಎಸ್. ಶ್ರೀಕಾಂತ್ (ವಾಹನ ಚಾಲಕರು)

ಶ್ರೀ. ಅರಬ್ ಜಾನ್ ಮತ್ತು ಶ್ರೀ. ಡಿ. ಜಿ. ಶಂಕರ್ ('ಡಿ' ಗ್ರೂಪ್ ನೌಕರರು)

ಮುಖ ಪುಟ ಚಿತ್ರ : Resource Management in Rainfed Drylands - MYRADA ದಿಂದ

Design by dataworx (www.dataworx.co.in)

ಕರ್ನಾಟಕ ಸರ್ಕಾರ

# ಕರ್ನಾಟಕ ಕೃಷಿ ಬೆಲೆ ಆಯೋಗ

**(Karnataka Agriculture Price Commission)**

(ಆದೇಶ ಸಂಖ್ಯೆ: ಕೃಇ61ಕೃಎಇ2013, ಬೆಂಗಳೂರು, ದಿ: 31/01/2014)

# ಕರ್ನಾಟಕದಲ್ಲಿ ರೈತರ ಆದಾಯ ಹಾಗೂ ಕಲ್ಯಾಣ ವೃದಿ
# ಕೃಷಿ ಬೆಲೆ ಆಯೋಗದ ಪ್ರಾಯೋಗಿಕ ಕಾರ್ಯಯೋಜನೆ

ಡಿಸೆಂಬರ್ 2016

ಕೃಷಿ ಆಯುಕ್ತರ ಕಾರ್ಯಾಲಯ ಆವರಣ
ಶೇಷಾದ್ರಿ ರಸ್ತೆ, ಬೆಂಗಳೂರು – 560 001

# ಪರಿವಿಡಿ


| ವಿವರ | ಪುಟ ಸಂಖ್ಯೆ |
|---|---|
| ಮುನ್ನುಡಿ | i |
| 1. ಪ್ರಸ್ತಾವನೆ | 1 |
| 2. ಕೇಂದ್ರದ ಆಶಾದಾಯಕ ಪ್ರಸ್ತಾವನೆ | 3 |
| 3. ಆದಾಯದ ಲೆಕ್ಕಾಚಾರ ಮತ್ತು ಸಾಧನೆ | 4 |
| 4. ತಾತ್ವಿಕ ಸ್ಪಷ್ಟೀಕರಣ ಮತ್ತು ದಾರಿಗಳು | 5 |
| 5. ರೈತರ ಆದಾಯದ ಹೆಚ್ಚಳಕ್ಕೆ ರಾಜ್ಯದ ಯೋಜನೆಗಳು | 6 |
| 6. ಕೃಷಿ ಬೆಲೆ ಆಯೋಗದ ಕಾರ್ಯಯೋಜನೆ | 8 |
| 7. ಯೋಜನೆಯ ಅನುಷ್ಠಾನ | 11 |
| 8. ಸರ್ಕಾರದ ವಿವಿಧ ಅಭಿವೃದ್ಧಿ ಇಲಾಖೆಗಳಿಂದ ರೈತರಿಗೆ ದೊರಕುವ ಸೌಲಭ್ಯಗಳು | 13 |
| 9. ಕೃಷಿ ವಿಜ್ಞಾನ ಕೇಂದ್ರ (KVK) ಗಳ ಪಾತ್ರ | 20 |

# ಮುನ್ನುಡಿ

ರಾಜ್ಯದ ರೈತರ ಉತ್ಪನ್ನಗಳಿಗೆ **ಸದೃಢ ಮಾರುಕಟ್ಟೆ** ಮತ್ತು **ಲಾಭದಾಯಕ ಬೆಲೆ** ಒದಗಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗುವ ಜವಾಬ್ದಾರಿಯ ಜೊತೆಗೆ **ರೈತರ ಆದಾಯ ಹಾಗೂ ಕಲ್ಯಾಣ** ವೃದ್ಧಿಗೆ ಸಂಬಂಧಿಸಿದ ಇತರೆ ವಿಚಾರಗಳ ಬಗ್ಗೆಯೂ ಗಮನಹರಿಸುವುದು ಕೃಷಿ ಬೆಲೆ ಆಯೋಗದ ಕರ್ತವ್ಯವಾಗಿರುತ್ತದೆ. ಘನ ಕೇಂದ್ರ ಸರ್ಕಾರ ಕೃಷಿ ಮಂತ್ರಾಲಯವನ್ನು **ಕೃಷಿ, ಸಹಕಾರ ಮತ್ತು ರೈತ ಕಲ್ಯಾಣ ಸಚಿವಾಲಯ** ಎಂದು ಪುನರ್ ನಾಮಕರಣ ಮಾಡಿ **ರೈತರ ಆದಾಯವನ್ನು ಮುಂದಿನ ಐದು ವರ್ಷಗಳೊಳಗೆ ದ್ವಿಗುಣಗೊಳಿಸುವ** ಪ್ರಸ್ತಾವವನ್ನೂ ಸಹ ಮಾಡಿದೆ.

ಈ ಹಿನ್ನೆಲೆಯಲ್ಲಿ ಕೃಷಿ ಬೆಲೆ ಆಯೋಗವು **ರೈತರ ಆದಾಯ ಮತ್ತು ಕಲ್ಯಾಣ ವೃದ್ಧಿ**ಗಾಗಿ ಕಾರ್ಯಯೋಜನೆಯೊಂದನ್ನು ರೂಪಿಸಿಕೊಂಡು ಪ್ರಾಯೋಗಿಕವಾಗಿ ಕಾರ್ಯಪ್ರವೃತ್ತವಾಗುತ್ತಿದೆ. ಈ ಉದ್ದೇಶಕ್ಕೆ ಪ್ರಸ್ತುತ ಕೈಪಿಡಿಯು ಸಂಬಂಧಿಸಿದ ವಿಜ್ಞಾನಿಗಳಿಗೆ, ಇಲಾಖಾ ಅಧಿಕಾರಿಗಳಿಗೆ, ಜಿಲ್ಲಾ ಆಡಳಿತಕ್ಕೆ, ಜೊತೆಗೆ ಭಾಗವಹಿಸುವ ಇತರೆ ಸಂಸ್ಥೆಗಳು ಹಾಗೂ ಒಟ್ಟಾರೆ ರೈತ ಸಮುದಾಯಕ್ಕೆ **ಮಾರ್ಗಸೂಚಿ**ಯಾಗಿ ಕರ್ತವ್ಯನಿರ್ವಹಿಸಲಿದೆ.

ರೈತರ ಆದಾಯವು ಇಂದಿನ ವರ್ತಮಾನದಲ್ಲಿ ಕೇವಲ ಕ್ಷೇತ್ರ ಬೆಳೆಗಳಿಂದ ಮಾತ್ರ ನಿರ್ಧರಿತವಾಗದೇ ಅನೇಕ ಮೂಲಗಳಿಂದ ಬರುವ ಆದಾಯದಿಂದ ನಿರ್ಧರಿತವಾಗುತ್ತದೆ. ಅವುಗಳೆಂದರೆ ಪಶು ಸಂಗೋಪನೆ, ರೇಷ್ಮೆ, ಮೀನುಗಾರಿಕೆ, ತೋಟಗಾರಿಕೆ, ರೈತ ಕುಟುಂಬದ ಸದಸ್ಯರು ಹೊರ ಊರುಗಳಲ್ಲಿ ಕೆಲಸ ಮಾಡಿ ಕಳುಹಿಸುವ ಹಣ ಉತ್ಯಾದಿಗಳು ಸಹ ಆದಾಯದಲ್ಲಿ ಸೇರುತ್ತವೆ. ಏಕ ಬೆಳೆ ಕೃಷಿಯ ಬದಲು ಈಗಿನ ಆಧುನಿಕ ತಂತ್ರಜ್ಞಾನವು **ಸಮಗ್ರ ಕೃಷಿ ಪದ್ಧತಿ** *(Integrated Farming System)* ಯನ್ನು ಉತ್ತೇಜಿಸುತ್ತದೆ. ಈ ಪದ್ಧತಿಯಲ್ಲಿ ಕ್ಷೇತ್ರ ಬೆಳೆಗಳ ಜೊತೆಗೆ ಆಯಾ ಕೃಷಿ ಹವಮಾನ ವಲಯಗಳಿಗೆ ಸೂಕ್ತವಾದ ಕೃಷಿ ಅರಣ್ಯ, ಕೃಷಿ–ತೋಟಗಾರಿಕೆ, ಕೃಷಿ–ಹೈನುಗಾರಿಕೆ, ಕೃಷಿ–ರೇಷ್ಮೆ, ಇತ್ಯಾದಿಗಳನ್ನು ಒಳಗೊಂಡಿರುತ್ತದೆ ಹಾಗೂ ಬೆಳೆಗಳು ಕೈಕೊಟ್ಟಾಗ ಬೇರೆ ಮೂಲಗಳಿಂದಲೂ ಆದಾಯವು ಬಂದು ರೈತರು ತೀರಾ ಕಂಗೆಡುವ ಪರಿಸ್ಥಿತಿಯಿಂದ ಪಾರು ಮಾಡುತ್ತದೆ.

ಕೃಷಿ ಬೆಲೆ ಆಯೋಗದ ಕಾರ್ಯಯೋಜನೆಯು ವಿವಿಧ ಕೃಷಿ ಪರಿಸರ ವಲಯಗಳ **ಪ್ರಾತಿನಿಧಿಕ ಗ್ರಾಮಗಳ** ಮೂಲಕ ಅನುಷ್ಠಾನಗೊಳ್ಳುತ್ತದೆ. **ಕೃಷಿ ವಿಜ್ಞಾನ ಕೇಂದ್ರ**ಗಳು ಈ ಕಾರ್ಯಯೋಜನೆಯನ್ನು ಅನುಷ್ಠಾನಗೊಳಿಸುತ್ತವೆ. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಕೃಷಿ ವಿಜ್ಞಾನ ಕೇಂದ್ರ ತುಮಕೂರು; ಧಾರವಾಡ ಕೃಷಿ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಕೃಷಿ ವಿಜ್ಞಾನ ಕೇಂದ್ರ ಹನುಮನಮಟ್ಟಿ; ರಾಯಚೂರು ಕೃಷಿ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಕೃಷಿ ವಿಜ್ಞಾನ ಕೇಂದ್ರ ರಾಯಚೂರು ಹಾಗೂ ಕಲುಬುರುಗಿ (ಕೇಂದ್ರೀಯ ವಿಶ್ವವಿದ್ಯಾನಿಲಯ ಕಲಬುರಗಿಯ ಜೊತೆಗೆ); ಬಾಗಲಕೋಟೆ ತೋಟಗಾರಿಕಾ ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಬರುವ ಕೃಷಿ ವಿಜ್ಞಾನ ಕೇಂದ್ರ ಕೋಲಾರ; ಶಿವಮೊಗ್ಗ ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಕೃಷಿ ವಿಜ್ಞಾನ ಕೇಂದ್ರ ಹಿರಿಯೂರು; ಬೀದರ್‌ನ ಪಶುವೈದ್ಯಕೀಯ ಮತ್ತು ಮೀನುಗಾರಿಕೆ ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಬರುವ ಮಂಗಳೂರಿನ ಕಂಕನಾಡಿ ಕೃಷಿ ವಿಜ್ಞಾನ ಕೇಂದ್ರ ಮತ್ತು ಅರಬಾವಿಯಲ್ಲಿನ ತೋಟಗಾರಿಕಾ ವಿಸ್ತರಣಾ ಘಟಕ ಇವುಗಳು ಸದರಿ ಕಾರ್ಯಕ್ರಮದ ಅನುಷ್ಠಾನ ಕೇಂದ್ರಗಳಾಗಿವೆ. ಈ ಕೃಷಿ ವಿಜ್ಞಾನ ಕೇಂದ್ರಗಳು ಪ್ರಾತಿನಿಧಿಕ ಗ್ರಾಮಗಳನ್ನು ಈಗಾಗಲೇ ಆಯ್ಕೆ ಮಾಡಿದ್ದು, ಈ ಯೋಜನೆಯ ಅನುಷ್ಠಾನಕ್ಕೆ ಸರ್ಕಾರದ ಮಂಜೂರಾತಿಯೂ ಶೀಘ್ರದಲ್ಲಿಯೇ ದೊರಕಲಿದೆ.

ಈ ಮೂಲಕ ಕೃಷಿ ಬೆಲೆ ಆಯೋಗ, ರೈತರ ಆದಾಯ ಹಾಗೂ ಕಲ್ಯಾಣ ವೃದ್ಧಿಯಲ್ಲಿ **ಸಂತೃಪ್ತ ಕೃಷಿ ಬದುಕು, ವಲಸೆ ಹಾಗೂ ಆತ್ಮಹತ್ಯೆರಹಿತ ಗ್ರಾಮೀಣ ಕರ್ನಾಟಕದ** ಕನಸೊಂದು ನಮ್ಮ ಮುಂದೆ ರೂಪುಗೊಳ್ಳುವಂತಾಗಬೇಕೆಂದು ಆಶಿಸುತ್ತದೆ.

ಡಿಸೆಂಬರ್ – 2016
ಬೆಂಗಳೂರು

**ಡಾ. ಟಿ. ಎನ್. ಪ್ರಕಾಶ್ ಕಮ್ಮರಡಿ**
ಅಧ್ಯಕ್ಷರು, ಕರ್ನಾಟಕ ಕೃಷಿ ಬೆಲೆ ಆಯೋಗ

## 1. ಪ್ರಸ್ತಾವನೆ

ಸ್ವಾತಂತ್ರ್ಯ ಪೂರ್ವದಲ್ಲಿ ನಮ್ಮ ಕೃಷಿ ವಲಯ ಅತಿ ಹಿಂದುಳಿದಿದ್ದು ದೇಶದ ಆಹಾರ ಅಭಾವವನ್ನು ನೀಗಿಸಲು ಪರದೇಶಗಳಿಂದ ಗೋದಿ, ಮೆಕ್ಕೆಜೋಳ ಮುಂತಾದ ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳ್ಳುವ ಮೂಲಕ ಜನರ ಹಸಿವನ್ನು ನೀಗಿಸಬೇಕಿತ್ತು. ಈ ಪರಿಸ್ಥಿತಿಯನ್ನು ಎದುರಿಸಿ ಕಂಗೆಟ್ಟ ರೈತಾಪಿ ವರ್ಗಕ್ಕೆ ಧೈರ್ಯ ತುಂಬಿ ಅಭಿವೃದ್ಧಿ ಸಾಧಿಸಲು ವಿಜ್ಞಾನಿಗಳು ಸುಧಾರಿತ ಬೇಸಾಯ ಪದ್ಧತಿಗಳು ಹಾಗೂ ತಳಿ ಸಂವರ್ಧನೆಗೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡುತ್ತಾ ಬಂದರು. ಸರ್ಕಾರ ನೀರಾವರಿ, ಮಾರುಕಟ್ಟೆ ಮತ್ತು ಹಣಕಾಸು ವ್ಯವಸ್ಥೆ, ಶಿಕ್ಷಣ, ಸಂಶೋಧನೆ ಹಾಗೂ ವಿಸ್ತರಣೆ ಇತ್ಯಾದಿಗಳ ಅಭಿವೃದ್ಧಿಗೆ ಸಮಗ್ರ ಕಾರ್ಯಕ್ರಮ ರೂಪಿಸುವುದರ ಜೊತೆಗೆ, ನವೀನ ತಂತ್ರಜ್ಞಾನವನ್ನು ಬಳಸಿಕೊಳ್ಳುವಲ್ಲಿ ಇಟ್ಟ ದಿಟ್ಟ ಹೆಜ್ಜೆಯ ಪರಿಣಾಮವಾಗಿ ನಮ್ಮ ದೇಶದಲ್ಲಿ ಹಸಿರು ಕ್ರಾಂತಿ (ಬೆಳೆ ಉತ್ಪಾದನೆ), ಹಳದಿ ಕ್ರಾಂತಿ (ಖಾದ್ಯ ತೈಲ ಉತ್ಪಾದನೆ), ಶ್ವೇತ ಕ್ರಾಂತಿ (ಹಾಲು ಉತ್ಪಾದನೆ), ನೀಲಿ ಕ್ರಾಂತಿ (ಮೀನು ಉತ್ಪಾದನೆ) ಇತ್ಯಾದಿಗಳಿಗೆ ನಾಂದಿಯಾಗಿದೆ.

**ಇವೆಲ್ಲವುಗಳ ಪರಿಣಾಮವಾಗಿ ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ಮತ್ಸ್ಯಗಾರಿಕೆ ಈ ಎಲ್ಲಾ ವಲಯಗಳ ಗಮನಾರ್ಹ ಬೆಳವಣಿಗೆಯಾಗಿ, ದೇಶ ಆಹಾರದಲ್ಲಿ ಸ್ವಾವಲಂಬನೆ ಸಾಧಿಸಿರುವುದು ಮಾತ್ರವಲ್ಲ, ವಿದೇಶಗಳಿಗೂ ಮೇಲಿನ ಉತ್ಪನ್ನಗಳನ್ನು ರಫ್ತು ಮಾಡುವಷ್ಟು ಸಾಮರ್ಥ್ಯ ಬಂದಿರುತ್ತದೆ.**

ಇತ್ತೀಚೆಗಿನ ವರ್ಷ (2014–15) ದಲ್ಲಿ ಜನರ ಜೀವನಾವಶ್ಯಕ ವಸ್ತುಗಳಾದ ಆಹಾರ, ಹಣ್ಣು, ತರಕಾರಿ, ಹಾಲು, ಸಕ್ಕರೆ, ಮೀನು, ಮಾಂಸ, ಮೊಟ್ಟೆ, ಬಟ್ಟೆಗಳ ದೇಶದ ಒಟ್ಟು ಉತ್ಪಾದನೆ ಹಾಗೂ ದೇಶದ ಪ್ರಜೆಗಳಿಗೆ ವ್ಯವಸ್ಥಿತ ರೀತಿಯಲ್ಲಿ ಹಂಚಿದರೆ ದೊರೆಯಬಹುದಾದ ತಲಾವಾರು ಪ್ರಮಾಣದ ವಿವರವನ್ನು ಮುಂದಿನ **ಪಟ್ಟಿ 1** ರಲ್ಲಿ ನೀಡಲಾಗಿದೆ. ಇದು ದೇಶಕ್ಕೆ ಆಹಾರ ಭದ್ರತೆ ಒದಗಿಸುವಲ್ಲಿ ರೈತಾಪಿವರ್ಗದ ಕಾಣಿಕೆಯನ್ನು ಎತ್ತಿ ತೋರಿಸುತ್ತಿದೆ. ಆದರೆ, ಇದಕ್ಕೆ ಪ್ರತಿಫಲವಾಗಿ ರೈತರಿಗೆ ದೊರಕಿರುವುದೇನೆಂದು ಯೋಚಿಸುವುದೂ ಅತ್ಯಗತ್ಯ.

**ಪಟ್ಟಿ 1. ಭಾರತದಲ್ಲಿ ಪ್ರತಿ ನಾಗರಿಕರಿಗೆ ಲಭ್ಯವಾಗುವ ಅಗತ್ಯ ಆಹಾರ ಪದಾರ್ಥಗಳು ಮತ್ತು ವಸ್ತ್ರದ ವಿವರ**

| ಕ್ರ. ಸಂ. | ಅಗತ್ಯ ಪದಾರ್ಥದ ವರ್ಗ | ಉತ್ಪಾದನೆ (2014–15) ಟನ್‌ಗಳಲ್ಲಿ | ದಿನ ಒಂದಕ್ಕೆ ತಲಾವಾರು ಲಭ್ಯತೆ (ಗ್ರಾಂ. ಗಳಲ್ಲಿ) |
|---|---|---|---|
| 1 | ಏಕದಳ ಧಾನ್ಯಗಳು | 235 ದಶಲಕ್ಷ | 531 |
| 2 | ದ್ವಿದಳ ಧಾನ್ಯಗಳು | 17 ದಶಲಕ್ಷ | 39 |
| 3 | ಆಹಾರ ಧಾನ್ಯಗಳು | 252 ದಶಲಕ್ಷ | 570 |
| 4 | ತರಕಾರಿಗಳು | 167 ದಶಲಕ್ಷ | 378 |
| 5 | ಹಣ್ಣುಗಳು | 86 ದಶಲಕ್ಷ | 195 |
| 6 | ಹಾಲು | 146 ದಶಲಕ್ಷ | 331 |
| 7 | ಅಡಿಗೆ ಎಣ್ಣೆ | 217 ಲಕ್ಷ | 49 |
| 8 | ಸಕ್ಕರೆ | 362 ಲಕ್ಷ | 82 |
| 9 | ಮೊಟ್ಟೆಗಳು | 7848 ಕೋಟಿ (ಸಂಖ್ಯೆ) | 2[ಅ] |
| 10 | ಮಾಂಸ ಮತ್ತು ಮೀನು | 13 ದಶಲಕ್ಷ | 240 |
| 11 | ಹತ್ತಿ | 37 ದಶಕೋಟಿ ಚದುರ ಮೀಟರ್ | 31[ಆ] |

[ಅ] ಹತ್ತು ದಿನಗಳ ಅವಧಿಯಲ್ಲಿನ ಮೊಟ್ಟೆಗಳ ಪ್ರಮಾಣ.
[ಆ] ವರ್ಷ ಒಂದಕ್ಕೆ ಚದುರ ಮೀಟರ್‌ಗಳಲ್ಲಿ.
ಆಧಾರ : ಭಾರತ ಸರ್ಕಾರದ ಕೃಷಿ ಸಚಿವಾಲಯದ ಪಶು ಸಂಗೋಪನೆ, ಹೈನುಗಾರಿಕೆ ಮತ್ತು ಮೀನುಗಾರಿಕೆ ಇಲಾಖೆ.

ಕೃಷಿ ಅಷ್ಟೇನೂ ಲಾಭದಾಯಕ ಕಸುಬಾಗಿಲ್ಲದ ಕಾರಣ ರೈತರು ಪಟ್ಟಣಕ್ಕೆ ವಲಸೆ ಹೋಗುವುದು ಸಾಧಾರಣ ಸಂಗತಿಯಾಗಿದೆ. ಕರ್ನಾಟಕವೂ ಸೇರಿ ಹಲವು ರಾಜ್ಯಗಳ ಕೃಷಿ ಬಿಕ್ಕಟ್ಟನೆದುರಿಸುತ್ತಿರುವುದರಿಂದ ರೈತರು ಆತ್ಮಹತ್ಯೆಯಂತಹ ದಾರುಣ ತೀರ್ಮಾನ ಕೈಗೊಳ್ಳುತ್ತಿರುವರು. **ಕರ್ನಾಟಕ ಕೃಷಿ ಬೆಲೆ ಆಯೋಗದ** ವರದಿ ಅನ್ವಯ, 2014–15 ಸಾಲಿನಲ್ಲಿ ರಾಜ್ಯದ ಪ್ರಮುಖ ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ಕೃಷಿ ಕೈಗೊಂಡ ರೈತರಿಗೆ ಬರಿದೇ ಬೀಜ, ಗೊಬ್ಬರ, ಕೂಲಿ ಇತ್ಯಾದಿ ಬಾಬ್ತಿನ **ನೇರವಾಗಿ ಭರಿಸುವ ವೆಚ್ಚ**ವನ್ನು ಪರಿಗಣಿಸಿದರೆ ಅಲ್ಪಸ್ವಲ್ಪ ಲಾಭ ದೊರಕಿದರೂ, ಕುಟುಂಬದ ಸದಸ್ಯರ ಶ್ರಮದ ಮೌಲ್ಯ, ಭೂಮಿಯ ಗೇಣಿ, ನಿರ್ವಹಣೆ ಇತ್ಯಾದಿ **ಅಗೋಚರ ವೆಚ್ಚಗಳನ್ನು** ಪರಿಗಣಿಸಿ ಸಮಗ್ರವಾಗಿ ಉತ್ಪಾದನಾ ವೆಚ್ಚ ಲೆಕ್ಕ ಹಾಕಿದರೆ ಈರುಳ್ಳಿ, ಹೊರತಾಗಿ ಮತ್ಯಾವ ಬೆಳೆಯೂ ಲಾಭದಾಯಕವಾಗಿಲ್ಲ.

**ಪಟ್ಟಿ 2. ಕರ್ನಾಟಕದ ಪ್ರಮುಖ ಬೆಳೆಗಳ 2014–15 ನೇ ಸಾಲಿನ ವಾಸ್ತವಸ್ಥಿತಿಯ ಸಾರಾಂಶ**

| ಕ್ರ. ಸಂ. | ಬೆಳೆಗಳು | ಉತ್ಪಾದಕತೆ (ಕ್ವಿ/ಎ.) | ಕೇಂದ್ರದ ಬೆಂಬಲ ಬೆಲೆ (MSP) (ರೂ/ಕ್ವಿ.) (2015–16) | ಉತ್ಪಾದನಾ ವೆಚ್ಚ (ರೂ./ಕ್ವಿ) | | ಎಕರೆವಾರು ಲಾಭ/ನಷ್ಟ (ರೂ.) | |
|---|---|---|---|---|---|---|---|
| | | | | ಭರಿಸಿದ ವೆಚ್ಚ + ಕುಟುಂಬ ಶ್ರಮ | ಒಟ್ಟು ವೆಚ್ಚ | ಭರಿಸಿದ ವೆಚ್ಚ + ಕುಟುಂಬ ಶ್ರಮ ಪರಿಗಣಿಸಿದರೆ | ಒಟ್ಟು ವೆಚ್ಚ ಪರಿಗಣಿಸಿದರೆ |
| 1 | ಭತ್ತ – ನೀರಾವರಿ | 26 | 1450 (ಗ್ರೇಡ್–ಎ) | 1030 | 1671 | 12666 | –3768 |
| 2 | ಭತ್ತ – ಮಳೆ ಆಶ್ರಿತ | 16 | 1410 (ಸಾಧಾರಣ) | 1189 | 1985 | –301 | –12730 |
| 3 | ರಾಗಿ | 13 | 1650 | 1881 | 2781 | –2808 | –14380 |
| 4 | ಬಿಳಿ ಜೋಳ | 5 | 1590 | 1712 | 2922 | 3029 | –3260 |
| 5 | ಶಕ್ತಿ ಜೋಳ | 8 | 1570 | 1307 | 1919 | –299 | –4923 |
| 6 | ಮುಸುಕಿನ ಜೋಳ | 15 | 1325 | 915 | 1425 | 3996 | –3842 |
| 7 | ಸಜ್ಜೆ | 6 | 1275 | 1639 | 2324 | –2687 | –6935 |
| 8 | ಕಡಲೆ | 4 | 3500 | 3456 | 4963 | –59 | –5621 |
| 9 | ತೊಗರಿ | 3 | 4625 | 4009 | 6286 | 3537 | –3293 |
| 10 | ಶೇಂಗಾ | 4 | 4030 | 3966 | 6186 | 572 | –8196 |
| 11 | ಸೂರ್ಯಕಾಂತಿ | 5 | 3800 | 3022 | 4416 | 1144 | –5214 |
| 12 | ಸೋಯಾಬೀನ್ | 6 | 2600 | 2324 | 3647 | 5127 | 3208 |
| 13 | ಟೊಮೆಟೊ | 176 | ಇಲ್ಲ | 742 | 1086 | 11879 | –48723 |
| 14 | ಈರುಳ್ಳಿ | 76 | ಇಲ್ಲ | 575 | 1021 | 51286 | 17417 |
| 15 | ಆಲೂಗಡ್ಡೆ | 35 | ಇಲ್ಲ | 1378 | 1906 | –9238 | –27960 |
| 16 | ಒಣಮೆಣಸಿನಕಾಯಿ | 9 | ಇಲ್ಲ | 7598 | 11679 | 24467 | –13482 |
| 17 | ಹತ್ತಿ | 9 | 3800 (ಮ.ಎಳೆ) 4100(ಉದ್ದ ಎಳೆ) | 2915 | 4528 | 8701 | –5684 |

**ಈ ಎಲ್ಲಾ ವಿಚಾರಗಳಿಂದ ತಿಳಿಯುವುದು ಏನೆಂದರೆ ದೇಶಕ್ಕೆ ಆಹಾರ ಭದ್ರತೆ ನೀಡಿದ ರೈತನಿಗೆ ಆದಾಯ ಭದ್ರತೆ (Income Security) ಇಲ್ಲದಾಗಿರುವುದು ಎಂಬ ಕಟುವಾಸ್ತವ ಸಂಗತಿಯಾಗಿರುತ್ತದೆ.**

## 2. ಕೇಂದ್ರದ ಆಶಾದಾಯಕ ಪ್ರಸ್ತಾವನೆ

ಸ್ವಾತಂತ್ರ್ಯ ಪಡೆದು ಏಳು ದಶಕದ ನಂತರ ದೇಶದ ಅತಿ ದೊಡ್ಡ ಸಾಮಾಜಿಕ ಗುಂಪಾದ ರೈತಾಪಿವರ್ಗದ **'ಕಲ್ಯಾಣ'** ಮತ್ತು **'ಆದಾಯದ'** ಬಗ್ಗೆ ಪ್ರಸ್ತಾವನೆ ಕೇಳಿ ಬರುತ್ತಿದೆ. ಕೇಂದ್ರದ ವಿತ್ತಮಂತ್ರಿಗಳಾದ **ಶ್ರೀ. ಅರುಣ್ ಜೇಟ್ಲಿಯವರು** ತಮ್ಮ 2016–17 ರ ಆಯವ್ಯಯ ಭಾಷಣದಲ್ಲಿ ರೈತರ ಆದಾಯವನ್ನು ಐದು ವರ್ಷದಲ್ಲಿ ದ್ವಿಗುಣಗೊಳಿಸುವ ವಿಚಾರ ಎತ್ತಿದ್ದು, ಮಾನ್ಯ ಪ್ರಧಾನಮಂತ್ರಿ **ಶ್ರೀ. ನರೇಂದ್ರ ಮೋದಿಯವರು** ಇದನ್ನು ಹಲವೆಡೆ ಪುನರುಚ್ಚಿಸಿರುವರು. ಇದಕ್ಕೆ ಪೂರಕವಾಗಿ ಕೇಂದ್ರದ ಕೃಷಿ ಸಚಿವಾಲಯವನ್ನು **'ಕೃಷಿ, ಸಹಕಾರ ಮತ್ತು ರೈತ ಕಲ್ಯಾಣ ಸಚಿವಾಲಯ'** ವೆಂದು ಪುನರ್ ನಾಮಕರಣ ಮಾಡಲಾಗಿದೆ.

ಕೇಂದ್ರದ ಕೃಷಿ ರಾಜ್ಯ ಸಚಿವರಾದ **ಶ್ರೀ. ಪುರುಷೋತ್ತಮ ರುಫಾಲ್‌ರವರು** ಕೃಷಿ ಪರಿಕರಗಳನ್ನು ಸಮರ್ಪಕವಾಗಿ ಬಳಸಿ, ಉತ್ಪಾದನಾ ಅನಿಶ್ಚಿತೆಗಳನ್ನು ದೂರ ಮಾಡಿ ಎಕರೆವಾರು ಉತ್ಪಾದಕತೆ ಅಧಿಕಗೊಳಿಸುವುದರ ಜೊತೆಗೆ, ಉತ್ಪಾದನಾ ವೆಚ್ಚ ಇಳಿಸಿ ಲಾಭದಾಯಕ ಬೆಲೆ ಸಿಗುವಂತೆ ಮಾಡುವುದು, ಹೀಗೆ ರೈತರ ಆದಾಯ ದ್ವಿಗುಣಗೊಳಿಸುವ ಯೋಜನೆಗಳನ್ನು ರಾಜ್ಯ ಸಭೆಗೆ ಅಧಿಕೃತವಾಗಿ ತಿಳಿಸಿರುವರು. ಇದಕ್ಕೆ ಪೂರಕವಾಗಿ ಮಾನ್ಯ ಪ್ರಧಾನಮಂತ್ರಿಗಳು ತಮ್ಮ ನೆಚ್ಚಿನ ಯೋಜನೆಗಳಾದ ಮಣ್ಣು ಆರೋಗ್ಯ ಸೂಚಿಸುವ ಚೀಟಿ ನೀಡಿ ಆ ಮೂಲಕ ಫಲವತ್ತತೆ ಹೆಚ್ಚಳ, ಬೇವು ಲೇಪನೆ ಮೂಲಕ ಯೂರಿಯಾ ಗೊಬ್ಬರದ ಸಮರ್ಥ ಬಳಕೆ, ಸಾವಯವ ಕೃಷಿ ಉತ್ತೇಜನಕ್ಕೆ **'ಪರಂಪರಾಗತ ಕೃಷಿ ವಿಕಾಸ ಯೋಜನೆ'**, ನೀರು ಮಿತವ್ಯಯ ಹಾಗೂ ಸದ್ಬಳಕೆಗಾಗಿ **'ಕೃಷಿ ಸಿಂಚಾಯಿ ಯೋಜನೆ'** ಇವೆಲ್ಲಕ್ಕಿಂತ ಮುಖ್ಯವಾಗಿ ಮಹತ್ವಾಕಾಂಕ್ಷೆಯ **'ಪ್ರಧಾನಮಂತ್ರಿ ಫಸಲು ವಿಮಾ ಯೋಜನೆ'** ಇತ್ಯಾದಿಗಳನ್ನು ಎಲ್ಲೆಡೆ ಪ್ರಸ್ತಾಪಿಸುತ್ತಿದ್ದಾರೆ.

ಕೃಷಿ ಮಾರಾಟ ವ್ಯವಸ್ಥೆಯನ್ನು ಸ್ಪರ್ಧಾತ್ಮಕಗೊಳಿಸಿ ರೈತರಿಗೆ ನ್ಯಾಯಯುತ ಬೆಲೆ ಒದಗಿಸಲು ಕರ್ನಾಟಕದ ಆನ್‌ಲೈನ್ ಮಾರಾಟವನ್ನು ಪ್ರಶಂಸಿರುವ ಕೇಂದ್ರ ಸರ್ಕಾರ ಇದೇ ಮಾದರಿಯಲ್ಲಿ ರಾಷ್ಟ್ರದಾದ್ಯಂತ **'ಏಕೀಕೃತ–ಇ ಮಾರಾಟ'** ವ್ಯವಸ್ಥೆಯನ್ನು ತರಲು ಮುಂದಾಗಿರುತ್ತದೆ. ಹಾಗೇ, ವರ್ಷಗಳಿಂದ ಚಾಲನೆಯಲ್ಲಿರುವ **'ಕನಿಷ್ಠ ಬೆಂಬಲ ಬೆಲೆ'** ಯೋಜನೆ (ಎಂ.ಎಸ್.ಪಿ.) ಯ ಯಶಸ್ವಿ ಅನುಷ್ಠಾನದಿಂದ ಬೇಕಾಬಿಟ್ಟಿ ಬೆಲೆಗೆ **'ಯಾತನೆ ಮಾರಾಟ'** ದಿಂದ ರೈತರನ್ನು ಬಿಡುಗಡೆ ಮಾಡಬಹುದು ಎನ್ನಲಾಗಿದೆ. ಈಗಾಗಲೇ ಚಾಲ್ತಿಯಲ್ಲಿರುವ ಆಹಾರಭದ್ರತೆ, ತೋಟಗಾರಿಕೆ ಅಭಿವೃದ್ಧಿ, ಸುಸ್ಥಿರ ಕೃಷಿ, ಖಾದ್ಯತೈಲ ಉತ್ಪಾದನೆ ಹೆಚ್ಚಳ, ಕೃಷಿ ವಿಸ್ತರಣೆ ಇತ್ಯಾದಿಗಳ ಬಗೆಗಿನ ಅಭಿಯಾನ (*Mission*) ಗಳು ಹಾಗೂ **'ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ'** ಇತ್ಯಾದಿಗಳನ್ನು ಸಮರ್ಪಕವಾಗಿ ಜಾರಿಗೊಳಿಸಿ, ರೈತರ ಆದಾಯ ವೃದ್ಧಿಪಡಿಸಲಾಗುವುದು ಎನ್ನಲಾಗಿದೆ. ಇವೆಲ್ಲವುಗಳ ಸಮನ್ವಯಕ್ಕಾಗಿ ಕನ್ನಡಿಗರೇ ಆಗಿರುವ ಕೇಂದ್ರದ ಕೃಷಿ ಇಲಾಖೆಯ ಅಪರ ಕಾರ್ಯದರ್ಶಿ **ಡಾ. ಅಶೋಕ್ ದಳವಾಯಿ** ನೇತೃತ್ವದಲ್ಲಿ ಸಮಿತಿ ಒಂದು ರಚನೆಯಾಗಿರುವುದು ವರದಿಯಾಗಿದೆ.

ಇವುಗಳ ಜೊತೆಗೆ, ಕೇಂದ್ರದ ನೀತಿ ಆಯೋಗದ ಕೃಷಿ ಆರ್ಥಿಕ ತಜ್ಞ ಡಾ. ರಮೇಶ್‌ಚಂದ್‌ರವರು, ಕೃಷಿ ಮಾರಾಟ ವಲಯಕ್ಕೆ **ವಿದೇಶಿ ನೇರ ಬಂಡವಾಳ** ಹಾಗೂ **ಕೃಷಿ ಭೂಮಿಯನ್ನು ಬಾಡಿಗೆಗೆ** ಪಡೆದು ಹಿಡುವಳಿ ವಿಸ್ತೀರ್ಣ ಹೆಚ್ಚಳಕ್ಕೆ ಈಗಿನ ಭೂಸುಧಾರಣೆಗೆ ಮಾರ್ಪಾಡು ತಂದು ಗೇಣಿಗಾರಿಕೆ ಪುನರ್‌ಸ್ಥಾಪನೆಯ ವಿಚಾರಗಳನ್ನು ಈ ನಿಟ್ಟಿನಲ್ಲಿ ಪ್ರಸ್ತಾಪಿಸಿದ್ದಾರೆ.

**ಕರ್ನಾಟಕ ಸೇರಿ ವಿವಿಧ ರಾಜ್ಯಗಳಲ್ಲಿ ಕೃಷಿ ಬಿಕ್ಕಟ್ಟನ್ನೆದುರಿಸುತ್ತಿದ್ದು, ಕಂಗೆಟ್ಟಿರುವ ರೈತಾಪಿ ವರ್ಗ ಆತ್ಮಹತ್ಯೆ ದಾರಿ ಹಿಡಿದಿರುವಾಗ ಈ ರೀತಿ ಆದಾಯ ಮತ್ತು ಕಲ್ಯಾಣಗಳ ಬಗೆಗಿನ ಪ್ರಸ್ತಾವನೆ ಅತ್ಯಂತ ಸ್ವಾಗತಾರ್ಹವಾಗಿದೆ.**

## 3. ಆದಾಯದ ಲೆಕ್ಕಾಚಾರ ಮತ್ತು ಸಾಧನೆ

- **ರಾಷ್ಟ್ರೀಯ ಮಾದರಿ ಗಣತಿ ಕಛೇರಿ** (National Sample Survey Office-NSSO) ಮೂಲದಿಂದ ರೈತ ಆದಾಯದ ಬಗ್ಗೆ ಈವರೆಗೆ 2003 ಮತ್ತು 2013 ರಲ್ಲಿ ಎರಡು ಬಾರಿ ಮಾತ್ರ ಲೆಕ್ಕಾಚಾರ ನಡೆದಿರುತ್ತದೆ. 2013 ರ ಗಣತಿ ಪ್ರಕಾರ ನಮ್ಮ ಗ್ರಾಮೀಣ ಪ್ರದೇಶದ ಶೇ.64 ರಷ್ಟು ಕುಟುಂಬಗಳು ಕೃಷಿ ಮೂಲದ ಆದಾಯದ ಮೇಲೆ ಅವಲಂಬಿತವಾಗಿರುತ್ತದೆ ಎನ್ನಲಾಗಿದೆ. ಇವುಗಳನ್ನು ಕೃಷಿ ಅಥವಾ ರೈತ ಕುಟುಂಬಗಳೆಂದು ಪರಿಗಣಿಸಬಹುದಾಗಿದ್ದರೂ ಇವುಗಳಲ್ಲಿ ಬೇರಾವುದೇ ಮೂಲದ ಆದಾಯವಿರದೇ ಬರಿದೇ ಬೇಸಾಯದಿಂದ ಬದುಕುತ್ತಿರುವ **ಶುದ್ಧ ಕೃಷಿ ಕುಟುಂಬಗಳು ಕೇವಲ ಶೇ.12 ಮಾತ್ರ ಎನ್ನಲಾಗಿದೆ**.

- ಇನ್ನುಳಿದ ಕುಟುಂಬಗಳು ಕೃಷಿ ಜೊತೆಗೆ ಪಶುಪಾಲನೆ (ಶೇ.34), ಕೂಲಿ ಮತ್ತು ನೌಕರಿ (ಶೇ.17), ಇನ್ನಿತರ ಮೂಲ ಉದಾ ಹೊರಗಿನಿಂದ ಪಾವತಿ (remittance), ಪಿಂಚಣಿ ಇತ್ಯಾದಿ (ಶೇ.29) ಹೀಗೆ, ಬಹು ಮೂಲದಿಂದ ಆದಾಯ ಪಡೆಯುತ್ತಿರುವವರು ಎಂದಾಯ್ತು.

- ಹೀಗೆ 2013 ರ ಗಣತಿ ಪ್ರಕಾರ ಭಾರತದಲ್ಲಿ ರೈತ ಕುಟುಂಬ ಒಂದು ಬಹುಮೂಲದಿಂದ ಪಡೆಯುತ್ತಿರುವ **ಸರಾಸರಿ ತಿಂಗಳ ಆದಾಯ ಕೇವಲ ರೂ.6653 ರಷ್ಟಿರುತ್ತದೆ**. ಇದರಲ್ಲಿ ಶೇ.48 ಭಾಗ ಮಾತ್ರ ಕೃಷಿ ಮೂಲದಿಂದ ಬಂದಿದ್ದರೆ, ಶೇ.32 ಭಾಗ ದಿನಗೂಲಿ, ನೌಕರಿ ಇತ್ಯಾದಿ ಮೂಲಕ, ಶೇ.12 ಪಶುಪಾಲನೆ, ಇನ್ನುಳಿದ ಶೇ.8 ರಷ್ಟು ವ್ಯಾಪಾರ ಇತ್ಯಾದಿ ಕೃಷಿಯೇತರ ಮೂಲದಿಂದ ಬಂದಿರುವ ಆದಾಯವಾಗಿರುತ್ತದೆ.

- ನಮ್ಮ ರೈತರಲ್ಲಿ ಸಣ್ಣ, ಮಧ್ಯಮ, ದೊಡ್ಡ ಹಿಡುವಳಿಯ ವಿವಿಧ ವರ್ಗಗಳಿದ್ದು, ಆದಾಯ ಪ್ರಮಾಣ ಮತ್ತು ಮೂಲಗಳೂ ಬೇರೆಯಾಗಿರುತ್ತವೆ. ಗಮನಿಸಬೇಕಾದ ಮುಖ್ಯ ವಿಚಾರವೆಂದರೆ ರಾಷ್ಟ್ರದಲ್ಲಿ ಶೇ.70 ರಷ್ಟು ರೈತರು ಒಂದು ಹೆಕ್ಟೇರ್‌ಗಿಂತ ಕಡಿಮೆ ಭೂಮಿಯಿರುವ **ಸಣ್ಣ ಬಡ ರೈತರಿದ್ದು, ಇವರಿಗೆ ಕೃಷಿ ಮೂಲದಿಂದ ದೊರೆಯುವ ಆದಾಯ ಅತ್ಯಲ್ಪ** (ಮಾಸಿಕ ರೂ.973) ಮಾತ್ರವಲ್ಲ ಈ ರೈತರ ಒಟ್ಟು ಆದಾಯದಲ್ಲಿ ಕೃಷಿಯ ಕೊಡುಗೆ ಶೇ.20 ಕೂಡಾ ಇರುವುದಿಲ್ಲ ಎಂದು ತಿಳಿದುಬಂದಿರುತ್ತದೆ.

- ಕೇಂದ್ರ ಸರ್ಕಾರ ಕೃಷಿ ಮೂಲದ ಆದಾಯ ದ್ವಿಗುಣಗೊಳಿಸಲು ಮುಂದಿಟ್ಟಿರುವ ಬಹುತೇಕ ಕಾರ್ಯಯೋಜನೆಗಳು ಬೇರೆ ಬೇರೆ ರೂಪಗಳಲ್ಲಿ ವರ್ಷಗಳಿಂದ ಚಾಲ್ತಿಯಲ್ಲಿರುವ ಹಳೆ ಯೋಜನೆಗಳೇ ಆಗಿದ್ದು, ಆದಾಯ ಅಧಿಕಗೊಳಿಸುವಲ್ಲಿ ಇವುಗಳ ಇದುವರೆಗಿನ ಪರಿಣಾಮ ಏನೆಂದು ನೋಡಿದರೆ ಉತ್ತರ ಅಷ್ಟೇನೂ ತೃಪ್ತಿಕರವಾಗಿಲ್ಲ. ರಾಷ್ಟ್ರೀಯ ಮಾದರಿ ಗಣತಿ ಲೆಕ್ಕಾಚಾರದ ಪ್ರಕಾರ 2003 ರಿಂದ 2013 ರವರೆಗಿನ ದಶಕದ ಅವಧಿಯಲ್ಲಿ ದೇಶದ ಮಟ್ಟದಲ್ಲಿ **ಕೃಷಿ ಮೂಲದ ಆದಾಯ ಶೇ.32 ರಷ್ಟು ಮಾತ್ರ ವೃದ್ಧಿಯಾಗಿದ್ದರೆ ಒಟ್ಟು ಆದಾಯದ ಹೆಚ್ಚಳ ಶೇ.34 ರಷ್ಟಿರುತ್ತದೆ**. ಈ ನಿಟ್ಟಿನಲ್ಲಿ ಕರ್ನಾಟಕದ ಸಾಧನೆ ಸ್ವಲ್ಪ ಅಧಿಕವಾಗಿದ್ದು, ಎರಡೂ ಮೂಲದ ಆದಾಯಗಳ ಹೆಚ್ಚಳ ಕ್ರಮವಾಗಿ ಶೇ.66 ಹಾಗೂ ಶೇ.52 ರಷ್ಟಿರುತ್ತದೆ.

- ಒಂದು ಹೆಕ್ಟೇರ್‌ಗಿಂತ ಕಡಿಮೆ ಇರುವ ಬಹುತೇಕ ಬಡ ರೈತರ ಕೃಷಿ ಮೂಲದ ಆದಾಯ ಈ ಅವಧಿಯಲ್ಲಿ ಅಧಿಕವಾಗುವುದಿರಲಿ, **ಶೇ.6 ರಷ್ಟು ಕುಂಠಿತವಾಗಿರುವುದು** ತಿಳಿದು ಬಂದಿರುತ್ತದೆ. ಅಂದಮೇಲೆ, ಇದುವರೆಗೂ ಅಷ್ಟೇನೂ ಪರಿಣಾಮಕಾರಿಯಾಗದ ಕೇಂದ್ರ ಸರ್ಕಾರದ ಈ ಎಲ್ಲಾ ಕಾರ್ಯಕ್ರಮಗಳು ಅಲ್ಪಸ್ವಲ್ಪ ಮೇಲ್ಮೈ ಬದಲಾವಣೆ ತಂದೊಡನೇ ಕೃಷಿ ಆದಾಯವನ್ನು ಐದು ವರ್ಷಗಳಲ್ಲಿ ದ್ವಿಗುಣಗೊಳಿಸುವಷ್ಟು ಸಮರ್ಪಕವಾಗಿದೆ ಎಂಬುದು ವಾಸ್ತವಕ್ಕೆ ದೂರವಾದ ವಿಚಾರವಾಗಿದೆ.

- ಕೇಂದ್ರ ಸರ್ಕಾರ ಬರಿದೇ ರೈತ ಆದಾಯವಲ್ಲ, **ಕಲ್ಯಾಣ** (Welfare) ದ ವಿಚಾರವನ್ನೂ ಪ್ರಸ್ತಾಪಿಸಿರುತ್ತದೆ. ಕಲ್ಯಾಣವೆನ್ನುವುದು **ಗುಣಾತ್ಮಕ** (Qualitative) ವಿಚಾರವಾಗಿದ್ದರೂ ಆದಾಯದೊಡನೆ ತಳುಕು ಹಾಕಿ ಇದರ ಅರ್ಥ ವ್ಯಾಪ್ತಿಯನ್ನು ಹುಡುಕಿದರೆ ಪ್ರತಿವ್ಯಕ್ತಿಗೂ **ಅನ್ನ, ವಸ್ತ್ರಾದಿಗಳಂತಹ ಕನಿಷ್ಠ ಅಗತ್ಯಗಳಾದರೂ ಸಿಗುವಂತಿರಬೇಕೆನ್ನುವುದರಲ್ಲಿ** ಎರಡು ಮಾತಿರದು. ಇದಾವುದೂ ಲಭಿಸದೇ ವ್ಯಕ್ತಿಯೊಬ್ಬ ಬಡತನದಲ್ಲಿ ಸಿಲುಕಿದಲ್ಲಿ ಕಲ್ಯಾಣದ ವಿಚಾರ ಬಹುದೂರ ಉಳಿದಿರುತ್ತದೆ.

- ಎಷ್ಟೇ ಅಪರಿಪೂರ್ಣವಾಗಿದ್ದರೂ ಬಡತನವನ್ನಳೆಯುವ ಅಳತೆಗೋಲೊಂದು ನಮ್ಮ ಮುಂದಿದೆ. ವ್ಯಕ್ತಿಯೊಬ್ಬನಿಗೆ ವಾರ್ಷಿಕವಾಗಿ ಕನಿಷ್ಠ 12,000 ರೂ. ಆದಾಯ ಸಿಗದಿದ್ದಲ್ಲಿ ಆತ **ಬಡತನ ರೇಖೆ** (Poverty Line) ಗಿಂತ ಕೆಳಗೇ ವಾಸಿಸುತ್ತಲಿರುವನು ಎನ್ನಲಾಗಿದೆ.

- **ಕಠು ವಾಸ್ತವ ಎಂದರೆ ಈ ಮೇಲಿನ ಲೆಕ್ಕಾಚಾರದ ಪ್ರಕಾರ ಕೃಷಿ ಮೂಲದ ಆದಾಯ ಒಂದನ್ನೇ ಪರಿಗಣಿಸಿದರೆ ನಮ್ಮ ಬಹುಪಾಲು ರೈತರು ಬಡತನ ರೇಖೆಗಿಂತ ಕೆಳಗೆ ಜೀವನ ನಡೆಸುತ್ತಿರುವುದು ಮಾತ್ರವಲ್ಲ ಅವರ ಕೃಷಿ ಆದಾಯ ದ್ವಿಗುಣಗೊಂಡರೂ ಬಡತನ ರೇಖೆಗಿಂತ ಮೇಲೇಳುವುದು ಸಾಧ್ಯವಾಗುವುದಿಲ್ಲ ಎನ್ನುವುದು.**

- 2013 ರ ಗಣತಿ ಪ್ರಕಾರ ಒಂದು ಹೆಕ್ಟೇರ್‌ಗಿಂತ ಕಡಿಮೆ ಹಿಡುವಳಿ ಹೊಂದಿರುವ ಬಹುತೇಕ ರೈತರ ಕೃಷಿ ಮೂಲದ ವಾರ್ಷಿಕ ತಲಾ ಆದಾಯ ಕೇವಲ 2919 ಆಗಿದ್ದು, ಇದನ್ನು ದ್ವಿಗುಣಗೊಳಿಸಿದರೂ ಬಡತನ ರೇಖೆಯ ಆಸುಪಾಸಿಗೂ ಬರುವುದೇ ಅಸಾಧ್ಯವಾಗಿರುತ್ತದೆ.

## 4. ತಾತ್ವಿಕ ಸ್ಪಷ್ಟೀಕರಣ ಮತ್ತು ದಾರಿಗಳು

- ರೈತರ ಆದಾಯ ಎಂದೊಡನೆ ಬರಿದೇ ಕೃಷಿಯಿಂದಲ್ಲ, ಜೊತೆಗೆ ಕೃಷಿ ಸಂಬಂಧಿತ ಪಶುಪಾಲನೆ, ರೇಷ್ಮೆ, ಅರಣ್ಯಕೃಷಿ ಇತ್ಯಾದಿ ಮೂಲಗಳಿಂದ, ಜೊತೆಗೆ ಕೃಷಿಯೇತರ ಅಂದರೆ ಹೊರಗಿನ ಕೂಲಿ, ನೌಕರಿ, ವ್ಯಾಪಾರ ಇತ್ಯಾದಿ ಹೀಗೆ, ಎಲ್ಲಾ ಮೂಲದ ಕುಟುಂಬದ ಒಟ್ಟು ಆದಾಯ ಪರಿಗಣಿಸಬೇಕು. ಆ ಆದಾಯ **ಸ್ಥಿರವಾಗಿ, ಊಹಿಸಲ್ಪಡುವಂತಿದ್ದು, (Predictable) ವರ್ಷವಿಡೀ ಹಂಚಿಕೆಯಾಗಿ ಸಿಗುವಂತಿರಬೇಕು**.

- ಆದಾಯದ ವೃದ್ಧಿಯೆಂದೊಡನೆ **ಹಣದುಬ್ಬರ** (Inflation) ಪರಿಗಣಿಸಿದ **ನೈಜ ಆದಾಯ** (Real Income) ದ ವೃದ್ಧಿಯಾಗಬೇಕು. ಆ ಮೂಲಕ ಬಹುಪಾಲು ರೈತರು **ಬಡತನ ರೇಖೆಯಿಂದ ಮೇಲೆ ಬಂದು, ಒಂದು ಉತ್ತಮ ಮಟ್ಟದ ಜೀವನ** ಸಾಗಿಸುವಂತಾದರೆ, ರೈತ ಕಲ್ಯಾಣದ ಪ್ರಸ್ತಾವನೆಗೆ ಅರ್ಥ ಬರುತ್ತದೆ.

- **ಅಂತಿಮವಾಗಿ, ನಗರಕ್ಕೆ ವಲಸೆ ಕಡಿಮೆಯಾಗಿ ಆತ್ಮಹತ್ಯೆಗೆ ಸಂಪೂರ್ಣ ವಿದಾಯ ಹೇಳಿ, ಯುವಕರು, ರೈತ ಮಹಿಳೆಯರೂ ಒಟ್ಟಾರೆ ರೈತಾಪಿವರ್ಗ ಸಂತೃಪ್ತಿಯಿಂದ ಕೃಷಿ ಕಾರ್ಯದಲ್ಲಿ ತೊಡಗುವಂತಾದಲ್ಲಿ ಕಲ್ಯಾಣ ಪರಿಕಲ್ಪನೆಗೆ ಸಮಗ್ರ ಅರ್ಥ ವ್ಯಾಪ್ತಿ ದೊರಕಲಿದೆ.**

- ಬಹುತೇಕ **ರೈತರು ಮುಂಗಾರು ಮತ್ತು ಮಾರುಕಟ್ಟೆಗಳೊಡನೆ ನಿರಂತರವಾಗಿ ಜೂಜಾಡಿ** ಜೀವನ ಸಾಗಿಸುತ್ತಿರುವ ಶೋಚನೀಯ ಪರಿಸ್ಥಿತಿ ಇನ್ನೂ ಮುಂದುವರೆಯುತ್ತಿದೆ. ಈ ಹಿನ್ನೆಲೆಯಲ್ಲಿ ಆಧುನಿಕ ಕೃಷಿ ಪದ್ಧತಿ ಮತ್ತು ತಂತ್ರಜ್ಞಾನಗಳು ಹಾಗೇ, ಸರ್ಕಾರದ ವಿವಿಧ ನೀತಿ, ಕಾರ್ಯಕ್ರಮಗಳು ರೈತರ ಆದಾಯ ವೃದ್ಧಿಗೊಳಿಸುವ

ನಿಟ್ಟಿನಲ್ಲಿ ಬೀರಿದ ಪರಿಣಾಮ, ಸಾಧಿಸಿದ ಜಯಾಪಜಯಗಳ ಸಮಗ್ರ ಮಟ್ಟ (MACRO) ಅವಲೋಕನ, ವಸ್ತು ನಿಷ್ಠೆ ವಿಮರ್ಶೆ ಬೇಕಾಗಿದೆ. **ಈ ನಿಟ್ಟಿನಲ್ಲಿ ಸಂಶೋಧನೆ, ಚರ್ಚೆ, ರೈತರೂ ಸೇರಿ ಎಲ್ಲಾ ವಾರಸುದಾರರೊಡನೆ ತಳಮಟ್ಟದ ಸಂವಾದ ಕಾರ್ಯಾಗಾರಗಳನ್ನು ತುರ್ತಾಗಿ ಕೈಗೊಳ್ಳಬೇಕು**.

- ರೈತರ ಆದಾಯ ಹಾಗೂ ಕಲ್ಯಾಣಗಳ ಪ್ರಸಕ್ತ ಪರಿಸ್ಥಿತಿ ಹಾಗೂ ವಾಸ್ತವ ಸ್ಥಿತಿಯನ್ನು **ಸೂಕ್ಷ್ಮಮಟ್ಟ** (Micro) ದಲ್ಲಿ ಅರಿಯಲು **"ಎಲ್ಲೆಗೆರೆ ಸಮೀಕ್ಷೆ"** (Baseline Survey) ನಡೆಸುವುದು ಅಗತ್ಯ. ಇದನ್ನು ಮಾದರಿ (Sample) ರೈತರು ಅಥವಾ ಪ್ರಾತಿನಿಧಿಕ ಹಳ್ಳಿಗಳ ಮಟ್ಟದಲ್ಲಿ ಶೀಘ್ರ ಕೈಗೊಳ್ಳಬಹುದು. **ಈ ಮೇಲಿನ ಎರಡೂ ಪೂರ್ವಬಾವಿ ಕ್ರಮಗಳ ಮೂಲಕ ಹೊರಹೊಮ್ಮುವ ಫಲಿತಾಂಶ ವಿಚಾರದಾರೆಗಳ ಆಧಾರದ ಮೇಲೆ ಮುಂದಿನ ಕ್ರಮಗಳ ಬಗ್ಗೆ ಗಮನಹರಿಸುವುದು**.

## 5. ರೈತರ ಆದಾಯದ ಹೆಚ್ಚಳಕ್ಕೆ ರಾಜ್ಯದ ಯೋಜನೆಗಳು

ಭೌಗೋಳಿಕವಾಗಿ ದೇಶದ 8ನೇ ದೊಡ್ಡ ರಾಜ್ಯವಾದ ಕರ್ನಾಟಕ, ಭಾರತದ ಒಟ್ಟು ಜನ ಸಂಖ್ಯೆಯಲ್ಲಿ ಶೇ. 5 ರಷ್ಟು ಜನತೆಗೆ ಆಶ್ರಯ ನೀಡಿರುತ್ತದೆ. ಪ್ರಗತಿಪರ ಭೂ ಸುಧಾರಣೆ, ಮೀಸಲಾತಿ, ಜನತಾಂತ್ರಿಕ ವಿಕೇಂದ್ರೀಕರಣಗಳಂತಹ ಮಹತ್ತರ ಕ್ರಮಗಳನ್ನು ಅನುಷ್ಠಾನಗೊಳಿಸಿದ ರಾಜ್ಯಗಳಲ್ಲಿ ಮುಂಚೂಣಿಯಲ್ಲಿರುವ ಕರ್ನಾಟಕ, **ಮಾಹಿತಿ ತಂತ್ರಜ್ಞಾನದ** ವಿಚಾರದಲ್ಲಿ ಕ್ರಾಂತಿಯನ್ನೇ ಸಾಧಿಸಿದ ರಾಜ್ಯವೆಂಬ ಹೆಗ್ಗಳಿಕೆಗೂ ಪಾತ್ರವಾಗಿರುತ್ತದೆ. ಆದರೆ, ಕೃಷಿ ಅಭಿವೃದ್ಧಿ ವಿಚಾರದಲ್ಲಿ ಮಾತ್ರ ಕರ್ನಾಟಕ ಹಿಂದೆ ಬಿದ್ದಿರುವುದು ಆಶ್ಚರ್ಯದ ಸಂಗತಿ.

ರಾಜ್ಯದ ಶೇ.73 ಕ್ಕೂ ಅಧಿಕ ರೈತರು ಸಣ್ಣ ಕೃಷಿಕರಾಗಿದ್ದು, ಇವರ ಹಿಡುವಳಿ ಗಾತ್ರ ಒಂದು ಹೆಕ್ಟೇರ್‌ಗಿಂತಲೂ ಕಡಿಮೆ ಇದೆ. ರಾಜಸ್ಥಾನದ ನಂತರ **ಅತಿ ಹೆಚ್ಚು ಒಣಭೂಮಿ ಹೊಂದಿರುವ ರಾಜ್ಯ ಕರ್ನಾಟಕ**. ಜಲಾನಯನ ಅಭಿವೃದ್ಧಿಯಲ್ಲಿ ಮೊದಲ ಹೆಜ್ಜೆ ಇಟ್ಟಿರುವ ರಾಜ್ಯವಾಗಿದ್ದರೂ ಈ ನಿಟ್ಟಿನಲ್ಲಿ ಗಮನಾರ್ಹ ಪ್ರಗತಿ ಸಾಧಿಸಬೇಕಾಗಿದೆ. ಕೃಷ್ಣ, ಗೋದಾವರಿ, ಕಾವೇರಿ.. ಹೀಗೆ ಹಲವಾರು ಪ್ರಮುಖ ನದಿಗಳು ಹರಿಯುತ್ತಿದ್ದರೂ, ಶೇ.30 ರಷ್ಟು ಕೃಷಿ ಭೂಮಿಗೆ ಮಾತ್ರ ನೀರಾವರಿ ಸೌಲಭ್ಯ ಕಲ್ಪಿಸುವಲ್ಲಿ ನಾವು ಯಶಸ್ಸು ಪಡೆದಿದ್ದೇವೆ. ರಾಷ್ಟ್ರಮಟ್ಟದಲ್ಲಿ ಈ ಪ್ರಮಾಣ ಶೇ.42 ನ್ನು ಮೀರುತ್ತದೆ. ರಾಜ್ಯದ ರೈತರಲ್ಲಿ ಶೇ.62 ಕ್ಕೂ ಅಧಿಕ ರೈತರು ಋಣ ಬಾಧೆಯಲ್ಲಿ ಬಿದ್ದಿರುವವರು. ರಾಜ್ಯದ ಒಟ್ಟು ಭೂಮಿಯಲ್ಲಿ ಶೇ.60 ಕ್ಕೂ ಅಧಿಕ ಭಾಗ ಮಣ್ಣು ಸವೆತ, ಕ್ಷಾರ, ಭೂ ಕೊರೆತ ಇತ್ಯಾದಿ ಸಮಸ್ಯೆಗಳಿಗೆ ಸಿಕ್ಕಿ ಇದರ ಫಲವತ್ತತೆ ನಾಶವಾಗಿದೆ. ಇವೆಲ್ಲದರ ಕಾರಣಗಳಿಂದಾಗಿ ನಮ್ಮ ಹಲವಾರು ಬೆಳೆಗಳ ಇಳುವರಿ ಪ್ರಮಾಣ ಕಡಿಮೆಯಿರುತ್ತದೆ.

**ಕೃಷಿ ಅಭಿವೃದ್ಧಿಗೆ ಅಗತ್ಯ ತಂತ್ರಜ್ಞಾನ, ಬೀಜ, ಪರಿಕರ, ಹಣಕಾಸು ಇತ್ಯಾದಿಗಳ ರೈತರಿಗೆ ಪೂರೈಕೆಯಾಗುತ್ತಿದ್ದರೂ ಅವರ ಆದಾಯ ವೃದ್ಧಿ ಸಮರ್ಪಕವಾಗದಿರಲು ನೀರು, ಕೂಲಿ ಹಾಗೂ ಬೆಲೆ ಈ ಮೂರು ಪ್ರಮುಖ ಅಡ್ಡಗಾಲಾಗಿವೆ. ಇವಕ್ಕೆ ಪರಿಹಾರವಾಗಿ ಕೆಳಗಿನ ಕ್ರಮಗಳ ಬಗ್ಗೆ ತುರ್ತು ಗಮನಹರಿಸಬೇಕಾಗಿದೆ.**

1. **ಒಣಭೂಮಿ ಕೃಷಿ ಅಭಿವೃದ್ಧಿ**: ನೀರಾವರಿ ಸೌಲಭ್ಯವಿರುವ ಬೇಸಾಯದಲ್ಲಿ ಇಳುವರಿ ಪ್ರಮಾಣ ತೃಪ್ತಿಕರವಾಗೇ ಇದೆ. ಆದರೆ ಈ ಸಾಧನೆ ಮಳೆ ಆಶ್ರಯದ ಬಹುತೇಕ ಭೂಮಿಯಲ್ಲಿ ದೊಡ್ಡ ಸವಾಲಾಗಿದೆ. ಈ ನಿಟ್ಟಿನಲ್ಲಿ ತಂತ್ರಜ್ಞಾನ ವರ್ಗಾವಣೆ ಕಾರ್ಯಕ್ರಮ ಹಾಗೇ, ಪರಿಕರ, ಹಣಕಾಸು ಇತ್ಯಾದಿಗಳ ಸಮರ್ಪಕ ಪೂರೈಕೆಗೆ ಪ್ರಥಮ ಆದ್ಯತೆ ಸಿಗಬೇಕು.

2. **ಉತ್ಪಾದನಾ ವೆಚ್ಚ ಮತ್ತು ಕೃಷಿ ಯಾಂತ್ರೀಕರಣ:** ಉತ್ಪಾದನಾ ವೆಚ್ಚ, ಅದರಲ್ಲೂ **ಶ್ರಮದ ಬಾಬ್ತಿನ ವೆಚ್ಚ ಅತಿಯಾಗಿರುವುದು** ನಮ್ಮ ಕೃಷಿ ಲಾಭದಾಯಕತೆ ಮೇಲೆ ತೀವ್ರ ಪರಿಣಾಮ ಬೀರಿದೆ. ಇದಕ್ಕೆ ಪರಿಹಾರವಾಗಿ ಸೂಕ್ತ ತಂತ್ರಜ್ಞಾನ, ಯಂತ್ರೋಪಕರಣಗಳನ್ನು ತಯಾರಿಸಿ, ಸಾಮಾನ್ಯ ರೈತರಿಗೂ ಕೈಗೆಟುಕುವಂತಹ ವಿಸ್ತೃತ ಕಾರ್ಯಯೋಜನೆ ಜಾಲ ಏರ್ಪಾಟಾಗಬೇಕು.

3. **ಸಾಂಘಿಕ ಪ್ರಯತ್ನದ ಮೂಲಕ ಲಾಭದಾಯಕ ಬೆಲೆ:** ಸರ್ಕಾರ ಮಧ್ಯಪ್ರವೇಶದ ಮೂಲಕ ಕನಿಷ್ಠ ಬೆಂಬಲ ಬೆಲೆಯಲ್ಲಿ ಖರೀದಿಸುವುದರಿಂದ ಬೆಲೆ ಏರಿಳಿತ ಕಡಿಮೆಯಾಗಿ ಸ್ಥಿರತೆ ಸಿಗಬಹುದಾಗಿದೆ. ಆದರೆ, **ರೈತರ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ಸಿಗುವುದು ಅಂತಿಮವಾಗಿ ಮಾರುಕಟ್ಟೆಯಲ್ಲಿ**. ಹಾಗಾಗಿ ಗ್ರಾಹಕ ನೀಡುವ ಬೆಲೆಯಲ್ಲಿ ಗರಿಷ್ಠಪಾಲು ರೈತರು ಪಡೆಯಲು **ಸಾಂಘಿಕವಾಗಿ ಅವರ ಚೌಕಾಸಿಶಕ್ತಿ** (Bargaining Power) ಅಧಿಕ ಮಾಡುವುದು ಅವಶ್ಯಕ.

4. **ಬಹುಮೂಲದ ಆದಾಯ: ಒಂದೇ ಬೆಳೆ ಕೃಷಿ ಬದಲು ತೋಟಗಾರಿಕೆ ಬೆಳೆಗಳನ್ನೂ ಸೇರಿಸಿ ಬಹುಬೆಳೆಗಳ ಕೃಷಿ ಜೊತೆಗೆ, ಜಾನುವಾರು, ರೇಷ್ಮೆ, ಜೇನು ಇತ್ಯಾದಿ ಮೂಲಗಳಿಂದ ಆದಾಯ ರೈತನಿಗೆ ಬರುವಂತಾದಲ್ಲಿ ಆ ಆದಾಯ ಸ್ಥಿರವೂ, ಊಹಿಸಲ್ಪಡುವಂತಹದ್ದೂ ಆಗಲಿದೆ.**

**ಹಾಲಿ ಯೋಜನೆಗಳು:**

- ಈ ಮೇಲಿನ ನಾಲ್ಕು ಕ್ರಮಗಳು ಕಾರ್ಯರೂಪಕ್ಕೆ ತರುವ ಯೋಜನೆಗಳನ್ನು ಕರ್ನಾಟಕ ಸರ್ಕಾರ ಈಗಾಗಲೇ ರೂಪಿಸಿರುತ್ತದೆ. ಮಳೆ ಆಶ್ರಯದ ಕೃಷಿ ಉತ್ಪಾದನೆ ಹೆಚ್ಚಿಸಲು ಸುಧಾರಿಸಿದ **ಒಣ ಬೇಸಾಯ ತಂತ್ರಜ್ಞಾನ** ಹಾಗೂ **ಜಲಾನಯನ ಅಭಿವೃದ್ಧಿ** ಯೋಜನೆಯನ್ನು ರೂಪಿಸಿ ಅನುಷ್ಠಾನಕ್ಕೆ ತಂದಿರುವ ಮೊದಲ ರಾಜ್ಯ ಕರ್ನಾಟಕವಾಗಿದೆ.

- **ಸದ್ಯಕ್ಕೆ ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನ, ಭೂಚೇತನ ಇತ್ಯಾದಿ ಕಾರ್ಯಕ್ರಮ ಭೂಸಮೃದ್ಧಿ ಕಾರ್ಯಕ್ರಮದಲ್ಲಂತೂ ಬೆಳೆ ಉತ್ಪಾದನೆ ಅಧಿಕಗೊಳಿಸಿ ರೈತರ ಆರ್ಥಿಕಮಟ್ಟಗಳೆರಡನ್ನೂ ನಾಲ್ಕು ವರ್ಷಗಳಲ್ಲಿ ಶೇ.25 ರಷ್ಟು ಹೆಚ್ಚಿಸಲು ಯೋಜಿಸಲಾಗಿದೆ.**

- ಮಳೆ ಆಶ್ರಿತ ರೈತರ ಜೀವನ ಸುಧಾರಿಸಲು ಪ್ರತ್ಯೇಕ **'ಕೃಷಿ ಭಾಗ್ಯಯೋಜನೆ'** ತ್ವರಿತಗತಿಯಲ್ಲಿ ಮೇಲೆಳುತ್ತಿದೆ. ಜಲಾನಯನ ಪ್ರದೇಶದ ಸಮಗ್ರ ನಿರ್ವಹಣೆಗೆ **ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ** ರಚಿಸಲಾಗಿದೆ.

- ಹಾಗೇ, ಕೃಷಿಯಲ್ಲಿ ಕಾರ್ಮಿಕರ ಕೊರತೆ ನೀಗಲು ವ್ಯವಸ್ಥಿತ ರೀತಿಯ ಯಾಂತ್ರೀಕರಣ; **'ಕೃಷಿ ಯಂತ್ರಧಾರ'** ಯೋಜನೆ, ದೇಶಕ್ಕೆ ಮಾದರಿಯಾಗಿದೆ. ರೈತರ ಸಾಂಘಿಕಶಕ್ತಿ ಹೆಚ್ಚಿಸಲು **'ರೈತ ಉತ್ಪಾದಕ'** ಸಂಘಟನೆಗಳನ್ನು ರಚಿಸಲಾಗುತ್ತಿದೆ. ಎಲ್ಲವುದಕ್ಕಿಂತ ಮುಖ್ಯವಾಗಿ ರೈತರಿಗೆ ಬಹುಮೂಲದ ಆದಾಯ ಸಿಗುವಂತೆ ಮಾಡಲು **ಸಮಗ್ರ ಬೇಸಾಯ ಪದ್ಧತಿ** (Integrated Farming System) ಯನ್ನೂ ರಾಜ್ಯದ ಕೃಷಿ ವಿಶ್ವವಿದ್ಯಾನಿಲಯಗಳು ಈಗಾಗಲೇ ಜಾರಿಗೊಳಸಿರುತ್ತವೆ.

- ವಿಸ್ತರಣಾ ಕಾರ್ಯಕ್ರಮಗಳಿಗಾಗಿ **ಆತ್ಮ** (Agriculture Technology Management Agency) ಎನ್ನುವ ಪ್ರತ್ಯೇಕ ಸಂಸ್ಥೆಯೇ ರೂಪಿತವಾಗಿದೆ. ತೋಟಗಾರಿಕೆ ಬೆಳೆಗಳ ಉತ್ತೇಜನಕ್ಕೆ **ತೋಟಗಾರಿಕಾ ಮಿಷನ್** ಹಾಗೂ ದನ, ಕುರಿ, ಹಂದಿ, ಮೊಲ, ಮತ್ಸ್ಯ ಹೀಗೆ ವಿವಿಧ ಪಶುಪಾಲನೆ ಕೈಗೊಳ್ಳುವ ರೈತರಿಗೆ ವಿಧ ವಿಧದ ಯೋಜನೆಗಳೂ ನಮ್ಮಲಿದೆ.

## 6. ಕೃಷಿ ಬೆಲೆ ಆಯೋಗದ ಕಾರ್ಯಯೋಜನೆ

ಕರ್ನಾಟಕ ಕೃಷಿ ಬೆಲೆ ಆಯೋಗವು ರೈತರ ಆದಾಯವನ್ನು ಹೆಚ್ಚಿಸುವುದು ಹಾಗೂ ಆ ಮೂಲಕ ರೈತ ಕುಟುಂಬದ ಕಲ್ಯಾಣವನ್ನು ಸಾಧಿಸುವುದಕ್ಕಾಗಿ **ಪ್ರಾಯೋಗಿಕ ಕಾರ್ಯಯೋಜನೆ ಒಂದನ್ನು** ರೂಪಿಸಿಕೊಂಡಿದ್ದು, ಈ ಕಾರ್ಯಯೋಜನೆಯನ್ನು ರಾಜ್ಯದ ಎಂಟು ಜಿಲ್ಲೆಗಳಲ್ಲಿ ವಿವಿಧ ಕೃಷಿ ಹವಾಮಾನ ವಲಯಗಳಲ್ಲಿರುವ ಕೃಷಿ ವಿಜ್ಞಾನ ಕೇಂದ್ರಗಳ ಮೂಲಕ ಅನುಷ್ಠಾನಕ್ಕೆ ತರಲು ನಿರ್ಧರಿಸಿದೆ. ರಾಜ್ಯದ ಎಲ್ಲಾ ಕೃಷಿ ವಿಶ್ವವಿದ್ಯಾನಿಲಯಗಳು ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯ, ಪಶುವೈದ್ಯಕೀಯ ಮತ್ತು ಮೀನುಗಾರಿಕಾ ವಿಶ್ವವಿದ್ಯಾನಿಲಯ ಹಾಗೂ ಕೇಂದ್ರೀಯ ವಿಶ್ವವಿದ್ಯಾನಿಲಯಗಳೂ ಅನುಷ್ಠಾನ ಕಾರ್ಯದಲ್ಲಿ ನೆರವಾಗಲಿವೆ. ಜೊತೆಗೆ, ಅಭಿವೃದ್ಧಿ ಇಲಾಖೆಗಳಾದ ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ಮೀನುಗಾರಿಕೆ, ರೇಷ್ಮೆ, ಸಾಮಾಜಿಕ ಅರಣ್ಯ, ಆರೋಗ್ಯ, ಸಣ್ಣ ನೀರಾವರಿ ಇಲಾಖೆಗಳು ಹಾಗೂ ಬೆಂಗಳೂರಿನ ಪ್ರತಿಷ್ಠಿತ ಸಂಸ್ಥೆಯಾದ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಸಂಸ್ಥೆ (ISEC) ಹಾಗೂ ರಾಷ್ಟ್ರೀಯ ಭೂ ಸರ್ವೇಕ್ಷಣಾ ಸಂಸ್ಥೆ (NBSS & LUP) ಯೂ ಸಹ ಈ ಕಾರ್ಯಯೋಜನೆಯ ಅನುಷ್ಠಾನದಲ್ಲಿ ಪಾಲ್ಗೊಳ್ಳಲಿವೆ.

ಈ ಕಾರ್ಯಯೋಜನೆಯು ವಿಶಾಲ ವ್ಯಾಪ್ತಿ ಮತ್ತು ಪ್ರಯೋಜನವನ್ನು ಹೊಂದಿದೆ. ರೈತರು ಹಾಗೂ ರೈತ ಕುಟುಂಬಗಳ ಪ್ರಸಕ್ತ ಸ್ಥಿತಿಗತಿಗಳು, ಅವರ ಜಮೀನಿನ ಹಾಗೂ ಇತರೆ ಸಂಪನ್ಮೂಲಗಳ ಸ್ಥಿತಿಗತಿಗಳು ಮತ್ತು ಅವರು ಬಯಸತಕ್ಕಂತಹ ಬದಲಾವಣೆಗಳನ್ನು ಅರಿತುಕೊಳ್ಳುವುದು **ಮೊದಲ ಹಂತವಾಗಲಿದೆ**. ನಂತರ ಬೇರೆಡೆಗಳಲ್ಲಿನ ರೈತರು ಸಾಧಿಸಿರುವ ಪ್ರಗತಿಯನ್ನು ಕಣ್ಣಿಂದ ನೋಡಿ ಅರಿಯುವುದು ಮತ್ತು ತಂತ್ರಜ್ಞಾನದಲ್ಲಿ ಆಗಿರುವ ಅತ್ಯಾಧುನಿಕ ಬದಲಾವಣೆಗಳನ್ನು ರೈತರು ಸ್ವಯಂ ತಿಳಿದುಕೊಳ್ಳುವಂತೆ ಮಾಡಿ ಅವರ ಸಾಮರ್ಥ್ಯ ಹೆಚ್ಚಳ **ಎರಡನೆಯ ಹಂತವಾಗಲಿದೆ**.

ಮುಂದಿನ ಹಂತದಲ್ಲಿ ರೈತ ಬಯಸತಕ್ಕಂತಹ ಬದಲಾವಣೆಗಳು ಮತ್ತು ಅವರ ಅಭಿವೃದ್ಧಿಗೆ ಪೂರಕವಾದ ಬದಲಾವಣೆಗಳನ್ನು ತರುವಂತಹ ಕಾರ್ಯಕ್ರಮಗಳನ್ನು ಹಂತ ಹಂತವಾಗಿ ಅನುಷ್ಠಾನಗೊಳಿಸಲಾಗುತ್ತದೆ. **ಈ ಹಂತವು ನಿರಂತರವಾಗಿದ್ದು**, ಸರ್ಕಾರದ ಹಸ್ತಕ್ಷೇಪ ನಿಂತ ಮೇಲೂ ರೈತ ಅದನ್ನು ಮುಂದುವರೆಸಿಕೊಂಡು ಹೋಗುವ ಸ್ಥಿತಿ ಬಂದಿರುವಂತಾಗ ಬೇಕೆನ್ನುವುದು ಆಯೋಗದ ಅಂತಿಮ ಗುರಿ.

**ಈ ನಿಟ್ಟಿನಲ್ಲಿ ಕೃಷಿ ಬೆಲೆ ಆಯೋಗದ ಕಾರ್ಯಯೋಜನೆಗಳು ಕೆಳಕಂಡಂತಿವೆ:**

1. ಆಯ್ದ ಜಿಲ್ಲೆಗಳ **ಪ್ರಾತಿನಿಧಿಕ ಹಳ್ಳಿಗಳಲ್ಲಿ** ಈ ಎಲ್ಲಾ ಯೋಜನೆಗಳನ್ನು ಪ್ರಾಯೋಗಿಕವಾಗಿ ಅಳವಡಿಸಿ, ಆ ಮೂಲಕ ಆದಾಯದ ಹೆಚ್ಚಳದ ಸಾಧ್ಯಾ ಸಾಧ್ಯತೆಗಳನ್ನು ಮೊದಲು ಪರೀಕ್ಷಿಸಿ ನೋಡಬೇಕು. ನಂತರ ಇಡೀ ಜಿಲ್ಲೆಗೆ ಒಂದು **ನೀಲಿ ನಕ್ಷೆ** (Blue Print) ರೂಪಿಸಿ ಮುಂದುವರೆಯಬೇಕು.

2. ಇದಕ್ಕೆ ಪೂರಕವಾಗಿ ಆ ಹಳ್ಳಿಗಳ ಮಣ್ಣು, ನೀರು ಇತ್ಯಾದಿ ನೈಸರ್ಗಿಕ ಸಂಪನ್ಮೂಲಗಳ ಪಟ್ಟಿ ಮಾಡಿ, ಸಾಮಾಜಿಕ, ಆರ್ಥಿಕ ಪರಿಸ್ಥಿತಿ, ಆದಾಯ, ಕಲ್ಯಾಣ ಇತ್ಯಾದಿಗಳ ಬಗ್ಗೆ **'ಎಲ್ಲೆಗೆರೆ ಸಮೀಕ್ಷೆ' (Baseline Survey)** ಆಗಬೇಕು.

3. ಇದರ ಯಶಸ್ವಿ ಅನುಷ್ಠಾನದಲ್ಲಿ **ಕೃಷಿ ಸಂಶೋಧನಾ ಕೇಂದ್ರ** (KVK) ಗಳು ಪ್ರಮುಖ ಪಾತ್ರವಹಿಸಬೇಕಾಗಿದ್ದು, ಜಿಲ್ಲೆಯ ಸಂಬಂಧಿಸಿದ ಎಲ್ಲಾ ಇಲಾಖೆಗಳು ಹಾಗೂ ಪ್ರಮುಖ ಸ್ವಯಂಸೇವಾ ಸಂಸ್ಥೆಗಳೂ ಜೊತೆಗೂಡಬೇಕು.

**4. ಈ ಎಲ್ಲಾ ಕಾರ್ಯಯೋಜನೆಗಳ ಅನುಷ್ಠಾನಕ್ಕೆ ಪೂರ್ವಭಾವಿಯಾಗಿ ಆಯ್ದ ಪ್ರಾತಿನಿಧಿಕ ಹಳ್ಳಿಯ ಪ್ರತಿ ಕುಟುಂಬದ "ಸಮಗ್ರ ಪಾರಂ ಯೋಜನೆ" (Whole Farm Plan) ಹಾಗೂ ಆ ಬಾಬ್ತಿಗೆ ಅಗತ್ಯ ತಂತ್ರಜ್ಞಾನ ಹಣಕಾಸು, ವೆಚ್ಚ ಮತ್ತು ಸಂಭವನೀಯ ಆದಾಯದ ಮುನ್ನಂದಾಜು ಹಾಕಬೇಕು. ಈ ಮೂಲಕ ಸ್ಪಷ್ಟ ಪರಿಕಲ್ಪನೆಯೊಂದಿಗೆ ರೈತ ಆದಾಯದ ವೃದ್ಧಿಗಾಗಿ ಎಲ್ಲಾ ಕಾರ್ಯಯೋಜನೆಗಳ ಅನುಷ್ಠಾನಕ್ಕೆ ಮುಂದಾಗುವುದು ಅತ್ಯಂತ ಸೂಕ್ತ.**

5. ರೈತ ಆದಾಯ ಹಾಗೂ ಕಲ್ಯಾಣಕ್ಕೆ ಸಂಬಂಧಿಸಿದ ಎಲ್ಲಾ ಕಾರ್ಯಕ್ರಮಗಳ ಸಮನ್ವಯ ಹಾಗೂ ಒಗ್ಗೂಡಿಕೆ ಅಗತ್ಯವಾಗಿದ್ದು, ಈ ನಿಟ್ಟಿನಲ್ಲಿ ಜಿಲ್ಲಾಡಳಿತಾಧಿಕಾರಿಗಳ ನೇತೃತ್ವದಲ್ಲಿ ಒಂದು **ಸಮನ್ವಯ ಸಮಿತಿ** (Co-ordination Committee) ರಚನೆಯಾಗುವುದು ಅತ್ಯಂತ ಸೂಕ್ತ.

## ಅ) ಕೃಷಿಯೇತರ ಮೂಲದ ಆದಾಯ ವೃದ್ಧಿ:

- ರೈತ ಅಥವಾ ಕುಟುಂಬದ ಸದಸ್ಯರು ಹೊರಗೆ ನೌಕರಿ, ದಿನಗೂಲಿ ಮಾಡುವುದರಿಂದ ಜೊತೆಗೆ, ವ್ಯಾಪಾರ, ಇತರೆ ಕಸುಬುಗಳ ಮೂಲಕ, ಇನ್ನೂ ಕೆಲ ರೈತರು ತಮ್ಮ ಟ್ರ್ಯಾಕ್ಟರ್ ಇತರೆ ಯಂತ್ರೋಪಕರಣಗಳನ್ನು ಬಾಡಿಗೆ ನೀಡುವುದು ಇತ್ಯಾದಿ ಮೂಲಗಳಿಂದ ಆದಾಯ ಪಡೆಯುತ್ತಿರುತ್ತಾರೆ. ಈ ಮೂಲದ ಆದಾಯವನ್ನು ಲೆಕ್ಕಹಾಕಬಹುದೇ ಹೊರತು, ವೃದ್ಧಿಗೊಳಿಸುವ ಬಗ್ಗೆ ಕಾರ್ಯಯೋಜನೆ ರೂಪಿಸುವುದು, ಸದ್ಯಕ್ಕೆ ಕಷ್ಟವಾಗಲಿದೆ.

- ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿಗೆ ಸಂಬಂಧಿಸಿದ ಪ್ರತ್ಯಕ್ಷ ಹಾಗೂ ಪರೋಕ್ಷ ಹಲವಾರು ಸರ್ಕಾರದ ನೀತಿ, ನಿಲುವು, ಯೋಜನೆಗಳಿದ್ದು, ಇವುಗಳ ಮೂಲಕ ರೈತರು ಕುಟುಂಬಕ್ಕೆ ಉದ್ಯೋಗ ಮತ್ತು ಗಮನಾರ್ಹ ಪ್ರಮಾಣದ ಆದಾಯ ಸಿಗುವ ಸಾಧ್ಯತೆಯಿರುತ್ತದೆ.

- ಉದಾಹರಣೆಗೆ, ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ, ಬೀಜೋತ್ಪಾದನೆ, ಗೊಬ್ಬರ ಇತ್ಯಾದಿ ಕೃಷಿ ಪರಿಕರಗಳ ಮಾರಾಟ, ಸರಬರಾಜು ಯಂತ್ರೋಪಕರಣಗಳ ರಿಪೇರಿ, ನಿರ್ವಹಣೆ ಇತ್ಯಾದಿಗಳಿಂದ ಹಿಡಿದು ಕರಕುಶಲ, ಗುಡಿಕೈಗಾರಿಕೆ, **ಸೂಕ್ಷ್ಮ ಉದ್ದಿಮೆ** (Micro Enterprise) ಇತ್ಯಾದಿಗಳನ್ನು ಈ ನಿಟ್ಟಿನಲ್ಲಿ ಉದಾಹರಿಸಬಹುದು.

- ಈ ಬಗ್ಗೆ **ಕೌಶಲ್ಯ ಅಭಿವೃದ್ಧಿಗೆ** ಹಲವಾರು ಯೋಜನೆಗಳಿದ್ದು, ಅವುಗಳು ರೈತರಿಗೆ ವಿಶೇಷವಾಗಿ ಯುವಕರು ಹಾಗೂ ಮಹಿಳೆಯರಿಗೆ ತಕ್ಷಣ ಸಿಗಬೇಕು.

- ಇವುಗಳ ಜೊತೆಗೆ, **ಕೃಷಿ/ಪರಿಸರ ಪ್ರವಾಸ**, ಸಾವಯವ ಗ್ರಾಮಯೋಜನೆ ಇತ್ಯಾದಿ ನವೀನ ಯೋಜನೆಗಳೂ ರೈತರ ಆದಾಯ ವೃದ್ಧಿಗೆ ಸಹಕಾರಿಯಾಗಲಿವೆ.

- ಈ ಎಲ್ಲಾ ಮೂಲದಿಂದ ಉದ್ಯೋಗ ಹಾಗೂ ಆದಾಯ ಬಗ್ಗೆ ಯೋಜನೆ, ವಿಶ್ಲೇಷಣೆ, ನಡೆಸಿ ಅದನ್ನು ವೃದ್ಧಿಗೊಳಿಸುವ ಸಾಧ್ಯತೆ ಬಗ್ಗೆ ಚಿಂತಿಸಬಹುದಾಗಿದೆ.

- ಈ ನಿಟ್ಟಿನಲ್ಲಿ ತಜ್ಞರು, ಉದ್ಯಮಿಗಳು, ಜೊತೆಗೆ ಗ್ರಾಮೀಣ ಅಭಿವೃದ್ಧಿ ಮತ್ತು ಕೃಷಿಯ ಬಗ್ಗೆ ಅಧಿಕ ಆಸಕ್ತಿ ತೋರಿಸುತ್ತಿರುವ **ನವೋದ್ಯಮಿ (Start ups) ಗಳನ್ನೂ** ತೊಡಗಿಸಿಕೊಳ್ಳಲು ಜಿಲ್ಲಾಮಟ್ಟದಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸೂಕ್ತ ಕ್ರಮ ಅಗತ್ಯವಾಗಿದೆ.

## ಆ) ರೈತ ಕಲ್ಯಾಣ ಕಾರ್ಯಕ್ರಮಗಳು:

- ರೈತ ಕುಟುಂಬಕ್ಕೆ  ಬರಿದೇ ಆದಾಯ ಮಾತ್ರವಲ್ಲ, ಪೌಷ್ಠಿಕ ಆಹಾರ, ಫಲ, ಪುಷ್ಪ, ತರಕಾರಿ, ಜಾನುವಾರುಗಳಿಗೆ ಮೇವು, ಆರೋಗ್ಯ ಔಷದಿ, ಸಸ್ಯ ಇತ್ಯಾದಿ ಅಗತ್ಯವಾಗಿದ್ದು, ಅವುಗಳು ಆಯಾ ಫಾರಂ ಅಥವಾ ಗ್ರಾಮ ಮಟ್ಟದಲ್ಲೇ ಸಿಗುವಂತಾದಾಗ ಕಲ್ಯಾಣದ ಪರಿಕಲ್ಪನೆಗೆ  ಅರ್ಥಬರಲಿದೆ.

- ಸಮಗ್ರ ಕೃಷಿ ವ್ಯಾಪ್ತಿಯಲ್ಲಿ **ಹಿತ್ತಲು, ತೃಣಧಾನ್ಯ, ಸುಸ್ಥಿರ/ಸಾವಯವ ಕೃಷಿ ಪದ್ಧತಿಗಳನ್ನು ತಂದಲ್ಲಿ ಕುಟುಂಬದ ಆಹಾರ ಹಾಗೂ ಪೌಷ್ಠಿಕ ಭದ್ರತೆ** (Food & Nutritional Security) ಗೆ ಮಾತ್ರವಲ್ಲ, ಕಲ್ಯಾಣ, ಆ ಮೂಲಕ ಸಂತೃಪ್ತಿ ದೊರೆತು ಕೃಷಿ ಬದುಕಿಗೆ ವಿಶೇಷ ಮೆರುಗು ಬಂದಂತಾಗುತ್ತದೆ.

- **ಈ ನಿಟ್ಟಿನಲ್ಲಿ ಯಶಸ್ಸು ಸಾಧಿಸಿದ ಅತ್ಯಂತ ಪ್ರಗತಿಪರ ರೈತರು ರಾಜ್ಯಾದಾದ್ಯಂತ ಅಲ್ಲಲ್ಲಿ ಲಭ್ಯವಿರುವರು. ಇವರೊಡನೆ ಚರ್ಚೆ, ಸಂವಾದ, ಇವರ ಫಾರಂಗಳಿಗೆ ಭೇಟಿ, ಅಧ್ಯಯನಗಳು ವ್ಯವಸ್ಥಿತವಾಗಿ ನಡೆದು ಹಳ್ಳಿಯ ರೈತರು ಅದರಲ್ಲೂ ಮುಖ್ಯವಾಗಿ ಯುವಕರು ಹಾಗೂ ಮಹಿಳೆಯರು ಪ್ರತ್ಯಕ್ಷ ನೋಡುವಂತಾದಲ್ಲಿ ಅದರ ಪರಿಣಾಮ ಅದ್ಭುತವಾಗಿರುತ್ತದೆ.**

- ಇನ್ನೂ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಹಲವು ಕಲ್ಯಾಣ ಕಾರ್ಯಕ್ರಮಗಳ ಮೂಲಕ ರೈತರಿಗೆ ಸಾಮಾಜಿಕ ಭದ್ರತೆ ಒದಗಿಸಲು ನಿಯೋಜಿಸಲಾಗಿರುತ್ತದೆ. ಅವುಗಳ ಫಲಾನುಭವ ನೇರವಾಗಿ ರೈತರಿಗೆ ದೊರೆತು ಕಲ್ಯಾಣ ವೃದ್ಧಿಗೆ ಪೂರಕವಾಗುವಂತೆ ದಿಟ್ಟ ಕ್ರಮಗಳು ಅಗತ್ಯ.

- ಆಹಾರಭದ್ರತೆ ಗಟ್ಟಿಮಾಡಲು **ಪಡಿತರ (ಅನ್ನಭಾಗ್ಯ)** ಯೋಜನೆಯಿಂದ ಹಿಡಿದು ವಿವಿಧ ರೀತಿಯ ವಿಮೆ, **ರಿಯಾಯ್ತಿ** (Subsidy), ಸವಲತ್ತುಗಳೆಲ್ಲವನ್ನು ಗಣನೆಗೆ ತೆಗೆದುಕೊಂಡು ಆ ಮೂಲಕ ರೈತ ಆದಾಯ ಹಾಗೂ ಕಲ್ಯಾಣ ವೃದ್ಧಿಯ ಬಗ್ಗೆ ಸಮಗ್ರ ವಿಶ್ಲೇಷಣೆ/ಅಧ್ಯಯನ ಮಾಡಿ ಮುಂದುವರೆಯುವುದು ಅತ್ಯಂತ ಸೂಕ್ತ.

- ರೈತ ಆದಾಯ ಮತ್ತು ಕಲ್ಯಾಣ ಬಗೆಗಿನ ಈ ಕಾರ್ಯಯೋಜನೆ ದೀರ್ಘಾವಧಿಯಲ್ಲಿ ಪರಿಣಾಮ ಬೀರಿ ಯಶಸ್ಸಾಗಲು ಸರ್ಕಾರ ಮತ್ತು ವಿಜ್ಞಾನ ಸಂಸ್ಥೆಗಳ ಜೊತೆಗೆ, **ಸ್ವಯಂ ಸೇವಾ ಸಂಸ್ಥೆಗಳು** ಇತರೆ ಸರ್ಕಾರೇತರ ವ್ಯಕ್ತಿ ಸಂಸ್ಥೆಗಳ ಸಕ್ರಿಯ ಸಹಕಾರ ಅಗತ್ಯ. ಹಾಗೇ, ವಿವಿಧ ಸಹಕಾರ ಸಂಸ್ಥೆಗಳು ಬ್ಯಾಂಕ್ ಇತ್ಯಾದಿ ಹಣಕಾಸು ಸಂಸ್ಥೆಗಳು ಈ ನಿಟ್ಟಿನಲ್ಲಿ ಜವಾಬ್ದಾರಿ ಹೊರಲು ಮುಂದಾಗಬೇಕಾಗಿದೆ.

- **ಹಾಗೇ, ಹಳ್ಳಿಗಳಲ್ಲಿ ರೈತ ಗುಂಪು, ಸ್ವಸಹಾಯ ಸಂಸ್ಥೆಗಳು, ಮಹಿಳಾ ಮಂಡಳ, ಯುವಕರ ಸಂಘಗಳನ್ನು ಹುಟ್ಟುಹಾಕಿ, ಸ್ಥಳೀಯವಾಗಿ ನಾಯಕತ್ವ ಅದೂ ಯುವಕರು ಮತ್ತು ಮಹಿಳೆಯರಿಂದ ಏರ್ಪಾಟಾದಲ್ಲಿ ಅದಕ್ಕಿಂತ ಸೂಕ್ತ ಕಾರ್ಯಯೋಜನೆ ಮತ್ತೊಂದಿರದು.**

- ಈ ಮೂಲಕ ಆದಾಯ ಹಾಗೂ ಕಲ್ಯಾಣ ವೃದ್ಧಿಯಲ್ಲಿ **ಸಂತೃಪ್ತ ಕೃಷಿ ಬದುಕು, ವಲಸೆ ಹಾಗೂ ಆತ್ಮಹತ್ಯೆರಹಿತ ಗ್ರಾಮೀಣ ಕರ್ನಾಟಕದ** ಕನಸೊಂದು ನಮ್ಮ ಮುಂದೆ ರೂಪುಗೊಳ್ಳುವಂತಾಗಬೇಕು.

**ಆಯ್ಕೆ ಮಾಡಿಕೊಂಡಿರುವ ಎಂಟು ಜಿಲ್ಲೆಗಳು ಹಾಗೂ ಕೃಷಿ ವಿಜ್ಞಾನ ಕೇಂದ್ರಗಳು:**

- ತುಮಕೂರು : ಕೃಷಿ ವಿಜ್ಞಾನ ಕೇಂದ್ರ, ಕೊನೆಹಳ್ಳಿ, ತುಮಕೂರು (ಬೆಂಗಳೂರು ಕೃ.ವಿ.ವಿ.)
- ಕೋಲಾರ : ಕೃಷಿ ವಿಜ್ಞಾನ ಕೇಂದ್ರ, ಕೋಲಾರ (ಬಾಗಲಕೋಟೆ ತೋ.ವಿ.ವಿ.)
- ಚಿತ್ರದುರ್ಗ: ಕೃಷಿ ವಿಜ್ಞಾನ ಕೇಂದ್ರ, ಹಿರಿಯೂರು ಚಿತ್ರದುರ್ಗ (ಶಿವಮೊಗ್ಗ ಕೃ ಮತ್ತು ತೋ.ವಿ.ವಿ.)
- ದಕ್ಷಿಣ ಕನ್ನಡ: ಕೃಷಿ ವಿಜ್ಞಾನ ಕೇಂದ್ರ, ಮಂಗಳೂರು (ಬೀದರ್ ಪಶುವೈದ್ಯಕೀಯ, ಮೀನುಗಾರಿಕೆ ವಿ.ವಿ)
- ರಾಯಚೂರು: ಕೃಷಿ ವಿಜ್ಞಾನ ಕೇಂದ್ರ, ರಾಯಚೂರು (ರಾಯಚೂರು ಕೃ.ವಿ.ವಿ.)
- ಕಲಬುರಗಿ: ಕೃಷಿ ವಿಜ್ಞಾನ ಕೇಂದ್ರ, ಕಲಬುರಗಿ (ರಾಯಚೂರು ಕೃ.ವಿ.ವಿ. ಕೇಂದ್ರೀಯ ವಿ.ವಿ. ಕಲಬುರಗಿ)
- ಬೆಳಗಾವಿ: ತೋಟಗಾರಿಕೆ ವಿಸ್ತರಣಾ ಶಿಕ್ಷಣ ಘಟಕ, ಅರಬಾವಿ (ತೋ.ವಿ.ವಿ. ಬಾಗಲಕೋಟೆ)
- ಹಾವೇರಿ: ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ (ಧಾರವಾಡ ಕೃ.ವಿ.ವಿ.)

## 7. ಯೋಜನೆಯ ಅನುಷ್ಠಾನ

- ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರು (ಪ್ರಧಾನ ಅಧ್ಯಯನಕಾರರು) ತಮ್ಮ ವ್ಯಾಪ್ತಿಯಲ್ಲಿನ ಸೂಕ್ತ **ಪ್ರಾತಿನಿಧಿಕ ಗ್ರಾಮವೊಂದನ್ನು** ಆಯ್ಕೆ ಮಾಡಿ, **ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿನ** ಅಭಿವೃದ್ಧಿ ಇಲಾಖೆಗಳ ಅಧಿಕಾರಿಗಳು, ರೈತರು, ತಜ್ಞರ ಸಭೆಯಲ್ಲಿ ಒಪ್ಪಿಗೆ ಪಡೆಯಲಿದ್ದಾರೆ. ನಂತರ ಆಯ್ಕೆ ಮಾಡಿದ ಗ್ರಾಮದಲ್ಲಿ ರೈತರನ್ನು ಸಮಾವೇಶಗೊಳಿಸಿ ಅವರ ಸಹಮತವನ್ನೂ ಸಹ ಪಡೆಯಲಿದ್ದಾರೆ. ಆ ಬಳಿಕ ರೈತರು, ತಜ್ಞರು, ವಿಜ್ಞಾನಿಗಳು, ಇಲಾಖಾಧಿಕಾರಿಗಳು ಮತ್ತು ಬಾಹ್ಯ ಸಂಸ್ಥೆಗಳ ತಜ್ಞರ ತಾಂತ್ರಿಕ ಕಾರ್ಯಾಗಾರ ಒಂದರಲ್ಲಿ ಅನುಷ್ಠಾನದ ರೂಪುರೇಷೆಗಳನ್ನು ರೂಪಿಸಲಿದ್ದಾರೆ.

- ಆಯ್ಕೆಯಾದ ಗ್ರಾಮದ **ಎಲ್ಲೆಗೆರೆ ಸಮೀಕ್ಷೆ (Baseline Survey) ಯನ್ನು** ಬೆಂಗಳೂರಿನ **ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆಯು** ಆಯಾ ಕೃಷಿ ವಿಜ್ಞಾನ ಕೇಂದ್ರದ ತಾಂತ್ರಿಕ ಸಹಾಯದಿಂದ ಕೈಗೊಂಡು, ವಿಶ್ಲೇಷಿಸಿ, ಫಲಿತಾಂಶವನ್ನು ನೀಡುತ್ತದೆ.

- ಆಯಾ ಕೃಷಿ ವಿಜ್ಞಾನ ಕೇಂದ್ರಗಳು ಈ ಯೋಜನೆಯ ಕೇಂದ್ರ ಸ್ಥಾನವಾಗಿದ್ದು, **ಗ್ರಾಮ ಮಟ್ಟದಲ್ಲಿ ಅನುಷ್ಠಾನ ಘಟಕವನ್ನು** ಸ್ಥಾಪಿಸಲಾಗುವುದು. ಈ ಅನುಷ್ಠಾನ ಘಟಕಕ್ಕೆ ಒಬ್ಬ ಯೋಜನಾ ಸಹಾಯಕರನ್ನು ಹಾಗೂ ರೈತರ ಸಂಖ್ಯೆಗೆ ಅನುಗುಣವಾಗಿ ಇಬ್ಬರು ಕ್ಷೇತ್ರ ಸಹಾಯಕರನ್ನು ನೇಮಿಸಿಕೊಳ್ಳಲಾಗುವುದು. ಕಾರ್ಯಕ್ರಮದ ಅಂಗವಾಗಿ ಗ್ರಾಮದಲ್ಲಿ ಅನುಷ್ಠಾನಗೊಳಿಸುವ ಪ್ರತಿಯೊಂದು ಕೆಲಸದಲ್ಲಿಯೂ ಇವರು ಸಹಕರಿಸುತ್ತಾರೆ.

- ಎಲ್ಲೆಗೆರೆ ಸಮೀಕ್ಷೆ ಫಲಿತಾಂಶದ ಆಧಾರದ ಮೇಲೆ **ಹಳ್ಳಿಯ ಪ್ರತಿ ಕುಟುಂಬದ ಆದಾಯ ಮತ್ತು ಕಲ್ಯಾಣ ವೃದ್ಧಿಯ ನೀಲ ನಕ್ಷೆಯನ್ನು** ಬೆಂಗಳೂರಿನ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆಯು ತಯಾರಿಸಿದ ನಂತರ ಆಯ್ದ ರೈತ ಕುಟುಂಬಗಳಿಗೆ ಅತ್ಯಂತ ಸೂಕ್ತವಾದ **ಸಮಗ್ರ ಕೃಷಿ ಪದ್ಧತಿಗಳನ್ನು** (Integrated Farming System) ಕೃಷಿ ವಿಜ್ಞಾನ ಕೇಂದ್ರಗಳ ಸಹಯೋಗದಿಂದ ತಯಾರಿಸುತ್ತದೆ.

- ಕೃಷಿ ವಿಜ್ಞಾನ ಕೇಂದ್ರವು ಗ್ರಾಮದ ಕನಿಷ್ಠ 25 ಮಂದಿ ಪ್ರಗತಿಶೀಲ, ಉತ್ಸಾಹಿ ತರುಣ ರೈತರನ್ನು (ಮಹಿಳೆಯರೂ ಸೇರಿದಂತೆ) ಗುರುತಿಸಿ, ಕಾರ್ಯಾಗಾರ, ತರಬೇತಿ, ಶಿಕ್ಷಣ, ಪ್ರವಾಸ ಇತ್ಯಾದಿಗಳ ಮೂಲಕ ಕೃಷಿಯ ಬಗೆಗಿನ ಮೂಲ ಮನೋಭಾವ ಹಾಗೂ ದೃಷ್ಟಿಕೋನವನ್ನು ಆಶಾದಾಯಕವಾಗಿ ಪರಿವರ್ತಿಸುವ ಕಾರ್ಯಮಾಡುತ್ತದೆ.

- ರೈತರ ಕಲ್ಯಾಣಕ್ಕೆ ಸಂಬಂಧಿಸಿದ ಎಲ್ಲಾ ಹಾಲಿ ಸರ್ಕಾರಿ ಯೋಜನಾ ಕಾರ್ಯಕ್ರಮಗಳ ಬಗ್ಗೆ ರೈತರಿಗೆ ಮನವರಿಕೆ ಮಾಡಿ, ಫಲಾನುಭವ ಸಿಗುವಂತೆ ಮಾಡಲು ಕನಿಷ್ಠ **10 ಗ್ರಾಮ ಸಭೆಗಳನ್ನು** ನಡೆಸಲಾಗುತ್ತದೆ. ಜಿಲ್ಲಾ ಆರೋಗ್ಯ ಅಧಿಕಾರಿಗಳ ಮೂಲಕ **40 ವರ್ಷಕ್ಕೆ ಮೇಲ್ಪಟ್ಟ ಎಲ್ಲಾ ರೈತರ ಪ್ರಾಥಮಿಕ ಆರೋಗ್ಯ** ತಪಾಸಣೆಯನ್ನು ಮಾಡಿಸಲಾಗುವುದು. ಹಾಗೂ ಗ್ರಾಮದ ಪ್ರತಿ ಕೃಷಿ ಭೂಮಿಯ ಮಣ್ಣು ಆರೋಗ್ಯ ತಪಾಸಣೆ ಕೂಡಾ ಮಾಡಿಸಲಾಗುವುದು. ಈ ಜವಾಬ್ದಾರಿಯನ್ನು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು, ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರ ಸಹಭಾಗಿತ್ವದಲ್ಲಿ ವಹಿಸಿಕೊಳ್ಳುತ್ತಾರೆ.

- ಚಿತ್ರದುರ್ಗ ಜಿಲ್ಲೆಯಲ್ಲಿ **ಸಿರಿಧಾನ್ಯ ಹಾಗೂ ಅರಣ್ಯ ಕೃಷಿ ಆಧಾರಿತ** ಸಮಗ್ರ ಕೃಷಿ; ದಕ್ಷಿಣ ಕನ್ನಡ ಜಿಲ್ಲೆಯಲ್ಲಿ **ಅಡಿಕೆ, ತೆಂಗು, ಮಳೆಯಾಶ್ರಿತ ಭತ್ತ ಹಾಗೂ ಮೀನುಗಾರಿಕೆ ಆಧಾರಿತ** ಸಮಗ್ರ ಕೃಷಿ; ಕಲಬುರಗಿ ಜಿಲ್ಲೆಯಲ್ಲಿ **ದ್ವಿದಳಧಾನ್ಯ ಆಧಾರಿತ** ಸಮಗ್ರ ಕೃಷಿ; ತುಮಕೂರು ಜಿಲ್ಲೆಯಲ್ಲಿ **ತೆಂಗು, ರಾಗಿ** ಇತರೆ **ಸಿರಿಧಾನ್ಯ ಆಧಾರಿತ** ಸಮಗ್ರ ಕೃಷಿ ; ಕೋಲಾರ ಜಿಲ್ಲೆಯಲ್ಲಿ **ಹಣ್ಣು, ತರಕಾರಿ ಹಾಗೂ ಹೈನುಗಾರಿಕೆ ಆಧಾರಿತ** ಸಮಗ್ರ ಕೃಷಿ; ಹಾವೇರಿ ಜಿಲ್ಲೆಯಲ್ಲಿ **ಕೃಷಿ ಬೆಳೆಗಳು ಹಾಗೂ ಬೀಜೋತ್ಪಾದನೆ ಆಧಾರಿತ** ಸಮಗ್ರ ಕೃಷಿ; ಮತ್ತು ಬೆಳಗಾವಿ ಜಿಲ್ಲೆಯಲ್ಲಿ **ಒಣಭೂಮಿಯಲ್ಲಿ ಹಣ್ಣು, ತರಕಾರಿ, ಜೋಳದ ಬೆಳೆ ಆಧಾರಿತ** ಸಮಗ್ರ ಕೃಷಿ ಪದ್ಧತಿಗಳಿಗೆ ಆದ್ಯತೆಯನ್ನು ನೀಡಲಾಗುತ್ತದೆ.

- ಬೆಂಗಳೂರಿನ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಅಧ್ಯಯನ ಸಂಸ್ಥೆಯು ಈ ಕಾರ್ಯಕ್ರಮದ ಅನುಷ್ಠಾನದ ಸಲುವಾಗಿ ರಾಜ್ಯ ಹಾಗೂ **ರಾಷ್ಟ್ರಮಟ್ಟಗಳ ಕಾರ್ಯಾಗಾರಗಳನ್ನು** ಏರ್ಪಡಿಸಿ, ಕಾರ್ಯಯೋಜನೆಗೆ ಸಮಗ್ರ ಸ್ವರೂಪ ಮತ್ತು ನೀತಿ-ನಿಲುವುಗಳನ್ನು ನೀಡುತ್ತದೆ. ಜೊತೆಗೆ, ಸಮಗ್ರ ಕೃಷಿ ಮಾದರಿಗಳ ಪ್ರಾಯೋಗಿಕ ಅನುಷ್ಠಾನ, ನೀಲಿ ನಕ್ಷೆಯ ಅನ್ವಯ ಆದ್ಯತೆ ಮೇರೆಗೆ ಕಾರ್ಯಯೋಜನೆ ಅನುಷ್ಠಾನ, ಅತ್ಯಗತ್ಯ ತಾಂತ್ರಿಕ ಮಧ್ಯಪ್ರವೇಶ, **ಉಸ್ತುವಾರಿ ಮತ್ತು ಪುನರ್ ಯೋಜನೆ ಮೌಲ್ಯಮಾಪನ** ಇತ್ಯಾದಿಗಳ ಜವಾಬ್ದಾರಿಯನ್ನೂ ವಹಿಸುತ್ತದೆ.

- ಕಾರ್ಯಕ್ರಮದಲ್ಲಿ ಭಾಗಿಯಾಗುವ ರೈತರ ಮೂಲ ಮನೋಭಾವ ಮತ್ತು ಕಾರ್ಯಕ್ರಮದ ನಂತರ ಬದಲಾದ ಮನೋಭಾವಗಳನ್ನು ಸಿದ್ಧಪಡಿಸಿದ ಪ್ರಶ್ನಾವಳಿಗಳ ಮೂಲಕ ಹಂತ ಹಂತದಲ್ಲಿ ಕಂಡು ಹಿಡಿಯುವ ಜವಾಬ್ದಾರಿಯನ್ನು ವಹಿಸಿಕೊಳ್ಳುವಂತೆ ಬೆಂಗಳೂರಿನ ಕೃಷಿ ತಂತ್ರಜ್ಞಾನ ಅಳವಡಿಕೆ ಸಂಶೋಧನಾ ಸಂಸ್ಥೆಯನ್ನು (ATARI) ಕೋರಲಾಗುವುದು.

- ಹಳ್ಳಿಯ ರೈತರು, ಕೃಷಿ ಕಾರ್ಮಿಕರು ಮತ್ತಿತರರಿಗೆ ಸೂಕ್ತ ಕರಕುಶಲ, ಕೃಷಿ ಆಧಾರಿತ ಮತ್ತು ಕೃಷಿಯೇತರ ಉದ್ದಿಮೆಯಲ್ಲಿ ತರಬೇತಿ, **ವೃತ್ತಿಪರ ಶಿಕ್ಷಣ** (Vocational Education) ನೀಡಿ ಅವರುಗಳ ಸಾಮರ್ಥ್ಯವನ್ನು ಹೆಚ್ಚಿಸಿ ಜೀವನೋಪಾಯ ಕಂಡು ಕೊಳ್ಳುವಂತೆ ಸಂಬಂಧಪಟ್ಟ ಇಲಾಖೆಗಳಿಗೆ ನಿರ್ದೇಶನ ನೀಡುವ ಜವಾಬ್ದಾರಿಯು ಜಿಲ್ಲಾಡಳಿತದ್ದಾಗಿರುತ್ತದೆ.

- ಯೋಜನೆಯಲ್ಲಿ ಹಳ್ಳಿಯ ಎಲ್ಲ ರೈತರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಿ, ಸಮರ್ಪಕವಾಗಿ ಕಾರ್ಯಕ್ರಮ ಅನುಷ್ಠಾನ ನಡೆಸಲು ಹೊರಗಿನ **ಬಾಹ್ಯ ಸಂಸ್ಥೆ** (External Agency) ಅಥವಾ ಸರ್ಕಾರೇತರ ಸಂಸ್ಥೆಯನ್ನು ಸೂಕ್ತ ರೀತಿಯಲ್ಲಿ ಬಳಸಿಕೊಳ್ಳಲಾಗುವುದು.

## ೮. ಸರ್ಕಾರದ ವಿವಿಧ ಅಭಿವೃದ್ಧಿ ಇಲಾಖೆಗಳಿಂದ ರೈತರಿಗೆ ದೊರಕುವ ಸೌಲಭ್ಯಗಳು

- ಕೃಷಿ ಹಾಗೂ ಸಂಬಂಧಿತ ಉದ್ದಿಮೆಗಳ ಅಭಿವೃದ್ಧಿಗಾಗಿ ರಾಜ್ಯದ ವಿವಿಧ ಅಭಿವೃದ್ಧಿ ಇಲಾಖೆಗಳು ಅಂದರೆ ಕೃಷಿ, ತೋಟಗಾರಿಕೆ, ಜಲಾನಯನ ಅಭಿವೃದ್ಧಿ, ಪಶುಸಂಗೋಪನೆ, ರೇಷ್ಮೆ, ಮೀನುಗಾರಿಕೆ, ಕೃಷಿ ಮಾರುಕಟ್ಟೆ, ಸಾಮಾಜಿಕ ಅರಣ್ಯ, ಮುಂತಾದವುಗಳು ರೈತರಿಗೆ ಅನೇಕ ರೀತಿಯ ಸೌಲಭ್ಯಗಳನ್ನು ರಿಯಾಯಿತಿ ದರದಲ್ಲಿ ಒದಗಿಸುತ್ತಿವೆ. ಕೃಷಿ ವಲಯವು ರಾಜ್ಯದ ಒಟ್ಟಾರೆ ಆರ್ಥಿಕ ಪ್ರಗತಿಗೆ ನೀಡುತ್ತಿರುವ ಕೊಡುಗೆಯು ಕ್ರಮೇಣ ಕಡಿಮೆಯಾಗುತ್ತಿದ್ದರೂ ಸಹ ಈಗಲೂ ಅತಿ ಹೆಚ್ಚು ಉದ್ಯೋಗವನ್ನು ದೊರಕಿಸುವ ಕ್ಷೇತ್ರವಾಗಿದೆ. ಆದ್ದರಿಂದ ಈ ವಲಯವನ್ನು ಅಭಿವೃದ್ಧಿ ಪಡಿಸಿ ಆಹಾರ ಭದ್ರತೆಯನ್ನು ದೃಢಪಡಿಸಿಕೊಳ್ಳುವುದು ರಾಜ್ಯದ ಪ್ರಮುಖ ಉದ್ದೇಶವಾಗಿದೆ.

- ಕ್ಷೇತ್ರ ಬೆಳೆಗಳ ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸುವ ಮೂಲಕ, ಸಣ್ಣ ಮತ್ತು ಅತಿ ಸಣ್ಣ ರೈತರು ಹಾಗೂ ಮಹಿಳಾ ರೈತರ ಆದಾಯದ ಮತ್ತು ಜೀವನ ಮಟ್ಟ ಸುಧಾರಿಸಲು ವಿವಿಧ ರಾಜ್ಯ ಹಾಗೂ ಕೇಂದ್ರ ವಲಯ ಯೋಜನೆಗಳನ್ನು ಅನುಷ್ಠಾನಗೊಳಿಸುವುದು, ಬರಪೀಡಿತ ಪ್ರದೇಶಗಳ ಅಭೀವೃದ್ಧಿಗಾಗಿ ನಿರ್ದಿಷ್ಟ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸುವುದು, ಉತ್ತಮ ಗುಣಮಟ್ಟದ ಕೃಷಿ ಶಿಕ್ಷಣ ನೀಡುವುದು, ಕೃಷಿ ಸಂಶೋಧನೆ ಮಾಡುವುದು, ಕೃಷಿ ವಲಯವು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವುದು, ಸ್ಥಿರ ತಾಳಿಕೆಯುಳ್ಳ ಕೃಷಿ ಅಭಿವೃದ್ಧಿಯನ್ನು ಸಾಧಿಸಲು ಎಲ್ಲಾ ಭಾಗಿದಾರರನ್ನು ಒಳಗೊಂಡಂತೆ ಮಾನವ ಸಂಪನ್ಮೂಲ ಅಭಿವೃದ್ಧಿ ಮಾಡುವುದು, ಸ್ವಾಭಾವಿಕ ಸಂಪನ್ಮೂಲಗಳನ್ನು ದೀರ್ಘಕಾಲೀನ ಸ್ಥಿರತೆ ಇರುವ ರೀತಿಯಲ್ಲಿ ಸಂರಕ್ಷಿಸುವುದು, ಅಭಿವೃದ್ಧಿ ಪಡಿಸುವುದು ಹಾಗೂ ಬಳಕೆ ಮಾಡುವುದು, ಕೃಷಿಯಲ್ಲಿದುರಾಗುವ ಸಂಕಷ್ಟಗಳನ್ನು (ಪ್ರತಿಕೂಲ ಹವಾಮಾನವು ಸೇರಿದಂತೆ) ಎದುರಿಸಲು ಸೂಕ್ತ ಸಿದ್ಧತೆ ಮಾಡಿಕೊಳ್ಳುವುದು ಇತ್ಯಾದಿಗಳು ಕೃಷಿ ವಲಯದ ಪ್ರಗತಿಯನ್ನು ಸಾಧಿಸಲು ನೆರವಾಗುತ್ತವೆ. ಇದಕ್ಕನುಗುಣವಾಗಿ ಮೇಲೆ ತಿಳಿಸಿರುವ ಅಭಿವೃದ್ಧಿ ಇಲಾಖೆಗಳು ರೂಪಿಸಿರುವ ವಿವಿಧ ಕಾರ್ಯಕ್ರಮಗಳ ಸಂಕ್ಷಿಪ್ತ ಚಿತ್ರಣವನ್ನು ಕೆಳಗೆ ನಿರೂಪಿಸಲಾಗಿದೆ.

### ಅ) ಕೃಷಿ ಇಲಾಖೆ:

- **ಬಿತ್ತನೆ ಬೀಜ**: ಸಾಮಾನ್ಯ ರೈತರಿಗೆ **ಶೇ.50 ರ ರಿಯಾಯಿತಿ** ಮತ್ತು ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ರೈತರಿಗೆ **ಶೇ.75 ರ ರಿಯಾಯಿತಿ** ದರದಲ್ಲಿ ವಿವಿಧ ಬೆಳೆಗಳ ಪ್ರಮಾಣಿತ ಬಿತ್ತನೆ ಬೀಜಗಳನ್ನು ವಿತರಿಸಲಾಗುತ್ತದೆ. (ಉದಾಹರಣೆಗೆ ಪ್ರತಿ ಕಿಲೋ ಭತ್ತ ಮತ್ತು ಗೋದಿಯ ಹೆಚ್ಚು ಇಳುವರಿ ಕೊಡುವ ತಳಿಗಳ ಬೀಜಗಳಿಗೆ ಪ್ರತಿ ಕಿಲೋ ಗ್ರಾಂಗೆ ರೂ.10 ರಂತೆಯೂ ಮತ್ತು ಭತ್ತದ ಸಂಕರ್ಣ ಬೀಜಗಳಿಗೆ ಪ್ರತಿ ಕಿಲೋ ಗ್ರಾಂಗೆ ರೂ.50 ರಂತೆ ಸಹಾಯಧನ; ಹೆಚ್ಚು ಇಳವರಿ ಕೊಡುವ ದ್ವಿದಳಧಾನ್ಯ ತಳಿಗಳಿಗೆ ಪ್ರತಿ ಕಿಲೋ ಗ್ರಾಂಗೆ ರೂ.25 ಮತ್ತು ಎಣ್ಣೆಬೀಜಗಳಿಗೆ ಪ್ರತಿ ಕಿಲೋ ಗ್ರಾಂಗೆ ರೂ.12 ರ ಸಹಾಯಧನ).

- **ಮಣ್ಣು ಆರೋಗ್ಯ**: ರಾಜ್ಯದ ಎಲ್ಲ ರೈತ ಹಿಡುವಳಿದಾರರ ಜಮೀನುಗಳಲ್ಲಿನ ಮಣ್ಣು ಪರೀಕ್ಷೆ ಮಾಡಿ ಮಣ್ಣು ಆರೋಗ್ಯ ಚೀಟಿ ವಿತರಿಸಲಾಗುತ್ತದೆ. ಹಾಗೂ ಈ ಆರೋಗ್ಯ ಚೀಟಿಗಳಿಗೆ ಅನುಗುಣವಾಗಿ ಸಸ್ಯ ಪೋಷಕಾಂಶಗಳನ್ನು ಬಳಸಲು ಶಿಫಾರಸ್ಸು ಮಾಡಲಾಗುತ್ತದೆ. (ಉದಾಹರಣೆಗೆ ಮಣ್ಣಿನ ಫಲವತ್ತತೆ ಹೆಚ್ಚಿಸಲು ಹೆಕ್ಟೇರ್‌ಗೆ ರೂ.೫೦೦ ಸಹಾಯಧನ ಮತ್ತು ಪ್ರತಿ ಫಲಾನುಭವಿಗೆ ಗರಿಷ್ಠ ರೂ.೧೦೦೦ ಸಹಾಯಧನ; ಸಾವಯವ ಕೃಷಿ ಅಳವಡಿಕೆಗಾಗಿ ಎರೆಗೊಬ್ಬರ ಘಟಕಕ್ಕೆ ಪಾಲಿಥಿನ್ ಹಾಸಿಗೆಯನ್ನು ರೂ.೫,೦೦೦ ಗಳ ಸಹಾಯಧನ).

  **ಮಣ್ಣಿನ ಸತ್ವ ಹೆಚ್ಚಿಸುವುದಕ್ಕಾಗಿ** ಹಸಿರೆಲೆ ಗೊಬ್ಬರ ಬೀಜವನ್ನು ಸಾಮಾನ್ಯ ರೈತರಿಗೆ ಗರಿಷ್ಠ ರೂ.೨೦೦೦ ಮೀರದಂತೆ ಮತ್ತು ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ರೈತರಿಗೆ ಗರಿಷ್ಠ ರೂ.೩೦೦೦ ಮೀರದಂತೆ ವಿತರಿಸಲಾಗುವುದು.

ಇದೇ ರೀತಿ ಜಿಪ್ಸಮ್/ಕೃಷಿ ಸುಣ್ಣ/ಡೋಲೋಮೈಟ್ ಗಳನ್ನು ಸಾಮಾನ್ಯ ರೈತರಿಗೆ ರೂ.750 ಕ್ಕೆ ಮೀರದಂತೆ ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ರೈತರಿಗೆ ರೂ.1125 ಕ್ಕೆ ಮೀರದಂತೆ ವಿತರಿಸಲಾಗುವುದು. ಕೊರತೆ ಇರುವ ಪ್ರದೇಶಗಳಲ್ಲಿ ಸೂಕ್ಷ್ಮ ಪೋಷಕಾಂಶಗಳ ಪೂರೈಕೆಯನ್ನು ರಿಯಾಯಿತಿ ದರದಲ್ಲಿ ಮಾಡಲಾಗುವುದು. ಉಳಿದಂತೆ ಜೈವಿಕ ಗೊಬ್ಬರ, ಎರೆಹುಳು ಗೊಬ್ಬರ ಮತ್ತು ಸಿಟಿ ಕಾಂಪೋಸ್ಟ್‌ಗಳನ್ನೂ ಸಹ ರಿಯಾಯಿತಿಯಲ್ಲಿ ವಿತರಿಸಲಾಗುವುದು.

- **ಸಸ್ಯ ಸಂರಕ್ಷಣೆ**: <u>ಸಸ್ಯ ಸಂರಕ್ಷಣಾ ಪೀಡೆನಾಶಕಗಳನ್ನು</u> ಶೇ. 50 ರ ರಿಯಾಯಿತಿ ದರದಲ್ಲಿ ಪ್ರತಿ ಹೆಕ್ಟೇರ್‌ಗೆ ರೂ.500 ಮೀರದಂತೆ ಪ್ರತಿ ಹಂಗಾಮಿಗೆ ಗರಿಷ್ಠ 2 ಹೆಕ್ಟೇರ್‌ಗೆ ಕೀಟನಾಶಕಗಳು ಶಿಲೀಂದ್ರ ನಾಶಕಗಳು, ಕಳೆ ನಾಶಕಗಳು ಮುಂತಾದವುಗಳನ್ನು ವಿತರಿಸಲಾಗುತ್ತದೆ. <u>ಸಸ್ಯ ಸಂರಕ್ಷಣಾ ಉಪಕರಣಗಳನ್ನು</u> ಶೇ.50 ರ ರಿಯಾಯಿತಿಯಲ್ಲಿ ಪ್ರತಿ ಉಪಕರಣಕ್ಕೆ ಗರಿಷ್ಠ ರೂ.800 ಮೀರದಂತೆ ವಿತರಿಸಲಾಗುವುದು. ಉಳಿದಂತೆ ಜೈವಿಕ ಪೀಡೆ ನಾಶಕಗಳು, ವೈಜ್ಞಾನಿಕ ಧಾನ್ಯ ಸಂಗ್ರಹಣೆಗಾಗಿ ಸುಧಾರಿತ ಧಾನ್ಯ ಪೆಟ್ಟಿಗೆಗಳನ್ನು ಸಹ ರಿಯಾಯಿತಿ ದರದಲ್ಲಿ ವಿತರಿಸಲಾಗುವುದು.

- **ಸಾವಯವ ಗೊಬ್ಬರಗಳಿಗೆ** ವಿಶೇಷ ಮಹತ್ವ ನೀಡಿರುವ ಇಲಾಖೆಯು ರೈತರಿಗೆ ಬಯೋಡೈಜೆಸ್ಟರ್ ಘಟಕ ಸ್ಥಾಪನೆ, ಎರೆಹುಳು ಉತ್ಪಾದಕ ಘಟಕ ಸ್ಥಾಪನೆ ಹಾಗೂ ಇನ್ನೂ ಅನೇಕ ಅಂಶಗಳಿಗೆ ರಿಯಾಯಿತಿಯನ್ನು ನೀಡಿ ಸಹಾಯಧನವನ್ನು ಪೂರೈಸುತ್ತಿದೆ. (ಉದಾಹರಣೆಗೆ ಬಯೋಡೈಜೆಸ್ಟರ್ ಘಟಕದ ಸ್ಥಾಪನೆಗೆ ಸಾಮಾನ್ಯ ವರ್ಗದ ರೈತರಿಗೆ ಶೇ.50 ರ ಸಹಾಯಧನ ಅಥವಾ ರೂ.30,000 ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ರೈತರಿಗೆ ಶೇ.75 ರ ಸಹಾಯಧನ ಅಥವಾ ಗರಿಷ್ಠ ರೂ.45,000 ಮೀರದ ಸಹಾಯಧನ).

- **ಕೃಷಿ ಯಾಂತ್ರೀಕರಣ**: ಕೃಷಿ ಕಾರ್ಮಿಕರ ಕೊರತೆ ಸಮಸ್ಯೆಯನ್ನು ನೀಗಿಸುವುದು ಹಾಗೂ ಉತ್ಪಾದನಾ ವೆಚ್ಚವನ್ನು ಕಡಿಮೆಗೊಳಿಸುವ ಉದ್ದೇಶದಿಂದ ಎತ್ತುಗಳಿಂದ ಎಳೆಯುವ ಯಂತ್ರೋಪಕರಣಗಳಿಗೆ ಮತ್ತು ಟ್ರ್ಯಾಕ್ಟರ್ ಚಾಲಿತ ಯಂತ್ರೋಪಕರಣಗಳ ಖರೀದಿಗೆ ರಿಯಾಯಿತಿ ದರದಲ್ಲಿ ಸಹಾಯಧನವನ್ನು ನೀಡಲಾಗುತ್ತಿದೆ. ಜೊತೆಗೆ, ಕೃಷಿ ಯಂತ್ರಧಾರೆ ಯೋಜನೆಯ ಮೂಲಕ ಕೃಷಿ ಯಂತ್ರೋಪಕರಣಗಳನ್ನು ಬಾಡಿಗೆ ಆಧಾರದ ಮೇಲೆ ರೈತರಿಗೆ ಒದಗಿಸಲು ಕೇಂದ್ರಗಳನ್ನೂ ಸಹ ತೆರೆಯಲಾಗಿದೆ. (ಉದಾಹರಣೆಗೆ 20 ಅಶ್ವಶಕ್ತಿಯಯುಳ್ಳ ಟ್ರ್ಯಾಕ್ಟರ್‌ನ್ನು ಅದರ ಬೆಲೆಯ ಶೇ.25 ರಷ್ಟು ಸಹಾಯದೊಂದಿಗೆ (ಗರಿಷ್ಠ 75,000 ರೂಗಳ ಸಹಾಯದೊಂದಿಗೆ ವಿತರಿಸಲಾಗುವುದು) – 8 ಅಶ್ವಶಕ್ತಿಗಿಂತ ಕಡಿಮೆ ಶಕ್ತಿಯಿರುವ ಪವರ್ ಟಿಲ್ಲರ್ ಮತ್ತು ಪವರ್ ವೀಡರ್‌ಗಳನ್ನು ಅವುಗಳ ಮೌಲ್ಯದ ಶೇ. 40 ರಷ್ಟು ಅಥವಾ ಗರಿಷ್ಠ 40,000 ಸಹಾಯಧನದೊಂದಿಗೆ ವಿತರಿಸಲಾಗುವುದು; ಎಲ್ಲಾ ತರದ ನೀರಾವರಿ ಪಂಪ್‌ಸೆಟ್‌ಗಳಿಗೆ ಅವುಗಳ ಬೆಲೆಯ ಶೇ.50 ರಷ್ಟು ಅಥವಾ ಗರಿಷ್ಠ ರೂ15,000 ಸಹಾಯಧನ ನೀಡಲಾಗುತ್ತದೆ (ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ರೈತರು, ಸಣ್ಣ ಮತ್ತು ಅತಿ ಸಣ್ಣ ರೈತರು ಮಹಿಳಾ ಕೃಷಕರಿಗೆ ಶೇ.10 ರಷ್ಟು ಹೆಚ್ಚು ಸಹಾಯಧನ ನೀಡಲಾಗುವುದು).

- **ನೀರಾವರಿ**: ರಾಜ್ಯದ ರೈತರಲ್ಲಿ ನೀರಿನ ಮಿತ ಬಳಕೆ ಮಾಡುವಂತೆ ಪ್ರೋತ್ಸಾಹಿಸುವ ಸಲುವಾಗಿ **ಪ್ರಧಾನ ಮಂತ್ರಿಗಳ ಕೃಷಿ ಸಿಂಚಾಯಿ ಯೋಜನೆ**ಯ ಮೂಲಕ ತುಂತುರು ನೀರಾವರಿ ಘಟಕಗಳು ಹಾಗೂ ಹನಿ ನೀರಾವರಿ ಘಟಕಗಳನ್ನು ರಿಯಾಯಿತಿ ದರದಲ್ಲಿ ಒದಗಿಸಲಾಗುತ್ತಿದೆ. (ಉದಾಹರಣೆಗೆ ದ್ವಿದಳಧಾನ್ಯಗಳಿಗೆ ತುಂತುರು ನೀರಾವರಿ ವ್ಯವಸ್ಥೆಗಾಗಿ ಪ್ರತಿ ಹೆಕ್ಟೆರ್‌ಗೆ ರೂ.10,000 ಸಹಾಯಧನ; ಮಳೆ ಕೊಯ್ಲು ವ್ಯವಸ್ಥೆಗಳ ನಿರ್ಮಾಣ/ ಹೊಂಡಗಳಿಗೆ (ಲೈನಿಂಗ್ ಸಮೇತ) ರೂ.75 ಸಹಾಯಧನ, ಬೆಟ್ಟ-ಗುಡ್ಡ ಪ್ರದೇಶಗಳಿಗೆ ರೂ.90,000 ರೂ ಸಹಾಯಧನ).

- **ಬೆಳೆವಿಮೆ**: ಅತಿವೃಷ್ಠಿ, ಅನಾವೃಷ್ಠಿ, ಅಕಾಳಿಕ ಮಳೆ ಮುಂತಾದ ಪ್ರಕೃತಿ ವಿಕೋಪಗಳೂ ಸೇರಿದಂತೆ ಹಲವಾರು

ಕಾರಣಗಳಿಂದ ಬೆಳೆನಷ್ಟ ಉಂಟಾದಾಗ ರೈತನ ನೆರವಿಗೆ ಬರಲು **ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ವಿಮಾ ಯೋಜನೆ**ಯನ್ನು ಜಾರಿಗೆ ತರಲಾಗಿದೆ. ಬೆಳೆ ಸಾಲ ಪಡೆದ ರೈತರಿಗೆ ಈ ಯೋಜನೆ ಕಡ್ಡಾಯವಾಗಿದ್ದು, ಸಾಲ ಪಡೆಯದ ರೈತರಿಗೆ ಐಚ್ಛಿಕವಾಗಿರುತ್ತದೆ. ಮುಂಗಾರು ಹಂಗಾಮಿನಲ್ಲಿ 27 ವಿವಿಧ ಆಹಾರ ಮತ್ತು ಎಣ್ಣೆಕಾಳು ಬೆಳೆಗಳು ಹಾಗೂ 14 ವಾಣಿಜ್ಯ ಮತ್ತು ತೋಟಗಾರಿಕಾ ಬೆಳೆಗಳನ್ನು ಎಲ್ಲಾ ಜಿಲ್ಲೆಗಳಲ್ಲಿ ಅಧಿಸೂಚಿಸಲಾಗುತ್ತದೆ. ಇಳುವರಿಯ ಕೊರತೆಗೆ ಅನುಗುಣವಾಗಿ ಹಾಗೂ ಗ್ರಾಮ ಪಂಚಾಯಿತಿ/ಹೋಬಳಿ ಮಟ್ಟದಲ್ಲಿ ಬೆಳೆವಿಮೆ ಮಾಡಿಸಿದ ಎಲ್ಲಾ ರೈತರಿಗೂ ಬೆಳೆವಿಮಾ ನಷ್ಟ ಪರಿಹಾರ ನೀಡುವ ಮೂಲಕ ಭದ್ರತೆ ಒದಗಿಸುವುದು ಈ ವಿಮಾ ಯೋಜನೆಯ ಉದ್ದೇಶವಾಗಿದೆ. (ಉದಾಹರಣೆಗೆ ಆಹಾರ ಬೆಳೆಗಳು, ಎಣ್ಣೆಕಾಳು, ತೋಟಗಾರಿಕೆ, ವಾಣಿಜ್ಯ ಬೆಳೆಗಳಿಗೆ ಕಂತಿನ ದರದ ಶೇ.50 ರವರೆಗೆ ಸಹಾಯಧನ ನೀಡಲಾಗುವುದು.

### ಆ) ಜಲಾನಯನ ಅಭಿವೃದ್ಧಿ ಇಲಾಖೆ

- ಈ ಇಲಾಖೆಯು ಹರಿಯುವ ನೀರಿನ ಪರಿಣಾಮಕಾರಿ ನಿರ್ವಹಣೆ, ಸುಧಾರಿತ ಮಣ್ಣು ಹಾಗೂ ತೇವಾಂಶ ಸಂರಕ್ಷಣೆ ಕಾರ್ಯಕ್ರಮಗಳಾದ ಜಲಾನಯನ ಉಪಚಾರಗಳನ್ನು ಕೈಗೊಳ್ಳುವುದು, ಮಳೆ ನೀರು ಕೊಯ್ಲಿನ ಮುಖೇನ ಮೂಲ ತೇವಾಂಶ ಸಂರಕ್ಷಣೆ, ಮಳೆಯಾಶ್ರಿತ ಪ್ರದೇಶಗಳಲ್ಲಿ ಸಾಂಪ್ರದಾಯಕ ನೀರಿನ ಮೂಲಗಳ ನವೀನಕರಣವೂ ಸೇರಿದಂತೆ ನೀರಿನ ಮೂಲಗಳ ಸೃಷ್ಟಿಗೆ ಸದರಿ ಕಾರ್ಯಕ್ರಮಗಳನ್ನು ನರೇಗಾ ಕಾರ್ಯಕ್ರಮದ ಜೊತೆಗೆ ಒಗ್ಗೂಡಿಸಿ ಅನುಷ್ಠಾನಗೊಳಿಸುವುದು ಇತ್ಯಾದಿಗಳನ್ನು ರೈತರ ಅನುಕೂಲಕ್ಕಾಗಿ ಮಾಡುತ್ತದೆ.

- ರೈತರಿಗೆ ಈ ಕಾರ್ಯಕ್ರಮಗಳ ಮೂಲಕ ಪರ್ಯಾಯ ಸಮಪಾತಳಿ ಕಂದಕಗಳ ನಿರ್ಮಾಣ, ಸಮಪಾತಳಿ ಮತ್ತು ಕಂದಕ ಬದುಗಳ ನಿರ್ಮಾಣ, ಇಳಿಜಾರು ಪ್ರದೇಶದಲ್ಲಿ ಜಗತಿಕಟ್ಟೆ/ಮಟ್ಟ ಹಾಳೆಗಳ ನಿರ್ಮಾಣ ಮಾಡುವುದು, ಮಣ್ಣಿನ ತಳೀಗಳು/ಬ್ರಶ್‌ಹುಡ್‌ನ ತಡೆಗಳು, ಸಡಿಲ ಕಲ್ಲು ತಡೆಗಳ ನಿರ್ಮಾಣ, ಮಳೆ ನೀರು ಸಂಗ್ರಹಿಸಲು ಕೃಷಿ ಹೊಂಡ, ನಾಲಾ ಬದುಗಳು, ತಡೆ ಅಣೆಗಳು, ಜಿನುಗು ಕರೆಗಳು ಮುಂತಾದವುಗಳ ನಿರ್ಮಾಣ, ಮೇವು, ಇಂಧನ, ಅರಣ್ಯ ಮತ್ತು ತೋಟಗಾರಿಕಾ ಸಸ್ಯ ಪ್ರಭೇದಗಳ ಸಸಿಗಳನ್ನು ವಿತರಿಸುವುದು, ಹಳ್ಳಗಳಲ್ಲಿನ ಕೊಳಗಳು/ಕಟ್ಟೆಗಳು, ಕೃಷಿ ಹೊಂಡಗಳು ಇತ್ಯಾದಿಗಳಲ್ಲಿ ಮೀನುಗಾರಿಕೆ ಅಭಿವೃದ್ಧಿಗೆ ಒತ್ತು ನೀಡುವುದು ಇತ್ಯಾದಿ ಸೌಲಭ್ಯಗಳನ್ನು ಇಲಾಖೆಯು ಒದಗಿಸುತ್ತದೆ.

### ಇ) ತೋಟಗಾರಿಕೆ ಇಲಾಖೆ

- ತೋಟಗಾರಿಕೆಯು ಹಣ್ಣಿನ ಬೆಳೆಗಳು, ತರಕಾರಿಗಳು, ಹೂವು, ಸಾಂಬಾರು ಬೆಳೆಗಳು ಪ್ಲಾಂಟೇಷನ್ ಬೆಳೆಗಳು ಇತ್ಯಾದಿಗಳ ಉತ್ಪಾದನೆಗೆ ಸೀಮಿತವಾಗಿದೆ. ಇದರ ಜೊತೆಗೆ, ಜೇನು ಸಾಕಣೆಯು ಸಹ ಈ ಇಲಾಖೆಯ ಒಂದು ಅಂಗವಾಗಿದೆ.

- ರೈತರಿಗೆ ಈ ಇಲಾಖೆಯ ಮೂಲಕ ವಿವಿಧ ಸೌಲಭ್ಯಗಳು ದೊರಕುತ್ತವೆ. ತರಕಾರಿ ಬೀಜೋತ್ಪಾದನೆಗೆ, ಮಾದರಿ ನರ್ಸರಿಗಳಿಗೆ ಮತ್ತು ಸಣ್ಣ ನರ್ಸರಿಗಳಿಗೆ, ಹೊಸ ಹಣ್ಣಿನ ತೋಟದ ಸ್ಥಾಪನೆಗೆ, ಹಣ್ಣಿನ ಬೆಳೆಗಳಲ್ಲಿ ಸಮಗ್ರ ನೀರಾವರಿಗಾಗಿ ಬಹುವಾರ್ಷಿಕ ಸಾಂಬಾರು ಬೆಳೆಗಳಾದ ಕರಿಮೆಣಸು, ದಾಲ್ಚಿನ್ನಿ, ಲವಂಗ ಮತ್ತು ಜಾಯ್‌ಕಾಯಿಗಳ ಉತ್ಪಾದನೆಗೆ ಬೀಜ ಸಾಂಬಾರು ಮತ್ತು ಗೆಡ್ಡೆ ಸಾಂಬಾರು ಬೆಳೆಗಳಿಗೆ, ಹೂವು ಉತ್ಪಾದನೆಗೆ, ಸುಗಂಧ ಸಸ್ಯಗಳ ಉತ್ಪಾದನೆಗೆ, ತೋಟದ/ಪ್ಲಾಂಟೇಷನ್ ಬೆಳೆಗಳ ಉತ್ಪಾದನೆಗೆ (ಗೋಡಂಬಿ, ಕೋಕೊ ಇತ್ಯಾದಿ), ಹಳೆಯ ತೋಟದ ನವೀಕರಣ/ಪುನಃಶ್ಚೇತನಗೊಳಿಸುವಿಕೆಗೆ ಜೇನು ಸಾಕಣೆಗೆ ಹಸಿರು ಮನೆ ವ್ಯವಸ್ಥೆಗೆ ಸಮಗ್ರ ಕೊಯ್ಲೋತ್ತರ, ಶೈತ್ಯಾಗಾರ ಘಟಕಗಳ ನಿರ್ಮಾಣಕ್ಕೆ ಬದಿರು ಸಸಿಗಳ ಉತ್ಪಾದನೆಗೆ, ವಾಣಿಜ್ಯ

ತೋಟಗಾರಿಕೆಗೆ, ತೆಂಗು ಸಸಿಗಳ ಉತ್ಪಾದನೆ ಮತ್ತು ಹಂಚಿಕೆಗೆ ತೆಂಗು ಪ್ರದೇಶದ ವಿಸ್ತರಣೆಗೆ ರಿಯಾಯಿತಿ ನೀಡಿ ಸಹಾಯಧನವನ್ನು ವಿತರಿಸಲಾಗುವುದು.

**ಈ) ಪಶು ಸಂಗೋಪನೆ ಇಲಾಖೆ:**

- ಪಶುವೈದ್ಯಕೀಯ ಕೇಂದ್ರಗಳಲ್ಲಿ ಜಾನುವಾರುಗಳ ವಿವಿಧ ರೋಗಗಳಿಗೆ ಚಿಕಿತ್ಸೆ ನೀಡಲಾಗುತ್ತದೆ ಮತ್ತು ಮುಂಜಾಗ್ರತೆಯಾಗಿ ಲಸಿಕೆಗಳನ್ನು ಹಾಕಲಾಗುತ್ತದೆ.

- ಕೇಂದ್ರೀಯ ಪುತಸ್ಕೃತ ಜಾನುವಾರು ವಿಮಾ ಯೋಜನೆಯನ್ನು ಕರ್ನಾಟಕ ಜಾನುವಾರು ಅಭಿವೃದ್ಧಿ ಸಂಸ್ಥೆಯಿಂದ ಅನುಷ್ಠಾನಗೊಳಸಲಾಗುತ್ತಿದ್ದು, ಪ್ರತಿ ಫಲಾನುಭವಿಗೆ ಗರಿಷ್ಠ 2 ಮಿಶ್ರ ತಳಿ ಹಸು/ಎಮ್ಮೆ ವಿಮೆಗಾಗಿ ಸಹಾಯಧನವನ್ನು ಒದಗಿಸುತ್ತಿದ್ದು, ಹಾಲು ಒಕ್ಕೂಟಗಳ ಸದಸ್ಯತ್ವ ಹೊಂದಿರುವ ರೈತ ಜಾನುವಾರುಗಳಿಗೆ ಈ ವಿಮಾ ಸೌಲಭ್ಯ ದೊರಕುತ್ತದೆ.

- ರಾಜ್ಯದಲ್ಲಿ ಸ್ಥಳೀಯ ತಳಿಗಳಾದ ಹಳ್ಳಿಕಾರ್, ಅಮೃತ ಮಹಲ್, ಖಿಲ್ಲಾರ್, ರಾಸುಗಳ ಅಭಿವೃದ್ಧಿಯನ್ನು ಜಾನುವಾರುಗಳ ಕ್ಷೇತ್ರದಲ್ಲಿ ಮಾಡಲಾಗುತ್ತದೆ. ಮಿಶ್ರ ತಳಿ ಕಾರ್ಯಕ್ರಮದ ಮೂಲಕ ಹೈನು ರಾಸುಗಳ ಅಭಿವೃದ್ಧಿಯನ್ನು ಹಾಗೂ ಕೃಷಿ ಯೋಗ್ಯ ದೇಶೀಯ ತಳಿಗಳ ಸಂರಕ್ಷಣೆಯನ್ನು ಘನೀಕೃತ ವೀರ್ಯ ತಂತ್ರಜ್ಞಾನ ಮತ್ತು ಭ್ರೂಣದ ವರ್ಗಾವಣೆ ತಂತ್ರಜ್ಞಾನದ ಮೂಲಕ ಅಭಿವೃದ್ಧಿಪಡಿಸಲಾಗುತ್ತಿದೆ.

- ರಾಜ್ಯದಲ್ಲಿ 5 ಕುರಿ ಸಂವರ್ಧನಾ ಕೇಂದ್ರಗಳುನಿಗಮದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ಕೇಂದ್ರಗಳಿಂದ ತಳಿ ಅಭಿವೃದ್ಧಿಗಾಗಿ ಮಿಶ್ರ ತಳಿ ಸುಧಾರಿತ ತಳಿಯ ಟಗರುಗಳನ್ನು ರಾಜ್ಯದ ಕುರಿಗಾರರಿಗೆ ವಿತರಿಸಲಾಗುತ್ತದೆ. ಕೇಂದ್ರೀಯ ಬೇಡ್ ಪಾಲಕ್ ವಿಮಾ ಯೋಜನೆಯಡಿ ಕುರಿಗಾರರಿಗೆ ವಿಮೆ ಮಾಡಲಾಗುತ್ತಿದ್ದು, ಮರಣಿಸಿದ ಕುರಿದಾರರ ಕುಟುಂಬಗಳಿಗೆ ಜೀವವಿಮಾ ನಿಗಮದಿಂದ ವಿಮೆ ಪಾವತಿ ಮಾಡಲಾಗುತ್ತಿದೆ. ಜೊತೆಗೆ, ಕುರಿಗಾರರ ಕುಟುಂಬದ ವಿದ್ಯಾರ್ಥಿಗಳಿಗೆ ಸಹಾಯಧನವನ್ನು ನೀಡಲಾಗುತ್ತಿದೆ.

- ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತವು ಕೇಂದ್ರೀಯ ಉಣ್ಣೆ ಅಭಿವೃದ್ಧಿ ಮಂಡಳಿ ಮತ್ತು ಜೋಧಪುರ, ಇವರ ಸಹಯೋಗದೊಂದಿಗೆ ಕುರಿ ಮತ್ತು ಉಣ್ಣೆ ಅಭಿವೃದ್ಧಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ.

- ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘದ ಸದಸ್ಯರುಗಳಿಗೆ ಕುರಿ ಮತ್ತು ಮೇಕೆ ಘಟಕಗಳನ್ನು ಪ್ರತಿ ಘಟಕಕ್ಕೆ ಶೇ.25 ರಷ್ಟು ಸಹಾಯಧನದೊಂದಿಗೆ ವಿತರಿಸಲಾಗುತ್ತಿದೆ.

- ಕರ್ನಾಟಕ ರಾಜ್ಯದಲ್ಲಿ ಕುಕ್ಕುಟ ಅಭಿವೃದ್ಧಿಗಾಗಿ ಮೊಟ್ಟೆ ಕೋಳಿ ಸಾಕಾಣಿಕೆ ಮತ್ತು ಮಾಂಸದ ಕೋಳಿ ಸಾಕಾಣಿಕೆಗಾಗಿ ಸಹಾಯಧನವನ್ನು ನೀಡಲಾಗುತ್ತಿದೆ.

- ಇದೇ ರೀತಿ ಹಂದಿ ಸಾಕಾಣಿಕೆಗಾಗಿ ಮತ್ತು ಮೊಲ ಸಾಕಾಣಿಕೆಗೂ ಸಹ ರೈತರಿಗೆ ಸಹಾಯಧನವನ್ನು ನೀಡಲಾಗುತ್ತಿದೆ. ಜೊತೆಗೆ, ಮೇವು ಮತ್ತು ಪಶು ಆಹಾರ ಅಭಿವೃದ್ಧಿಯನ್ನೂ ಸಹ ಈ ಇಲಾಖೆಯು ಮಾಡುತ್ತಿದೆ.

**ಉ) ಕೃಷಿ ಮಾರಾಟ ಇಲಾಖೆ:**

- ಕೃಷಿ ಮಾರಾಟ ಇಲಾಖೆಯು ರಾಜ್ಯದಲ್ಲಿನ 157 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಮೂಲಕ ಕೃಷಿ ಉತ್ಪನ್ನಗಳ ಮಾರಾಟ ಹಾಗೂ ಖರೀದಿ **ವ್ಯವಹಾರವನ್ನು ಕ್ರಮಬದ್ಧಗೊಳಿಸುತ್ತಿದೆ**. ಇಲಾಖೆಯು ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ

ಮೇಲ್ವಿಚಾರಣೆ ಮತ್ತು ಮಾರ್ಗದರ್ಶನ ಮಾಡುತ್ತದೆ.

- ಮಾರುಕಟ್ಟೆಗಳಲ್ಲಿ ನಡೆಯುತ್ತಿರುವ ವಹಿವಾಟಿಗೆ ಹೆಚ್ಚುವರಿಯಾಗಿ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು, ಮಾರುಕಟ್ಟೆ ವ್ಯವಹಾರಗಳಲ್ಲಿ **ಪಾರದರ್ಶಕತೆ** ಕಾಯ್ದುಕೊಳ್ಳುವುದು, ಮಾರುಕಟ್ಟೆಗಳನ್ನು ಆಧುನೀಕರಣಗೊಳಿಸುವುದು ಮತ್ತು ರೈತರ ಕೃಷಿ ಉತ್ಪನ್ನಗಳಿಗೆ **ಸ್ಪರ್ಧಾತ್ಮಕ ಧಾರಣೆ** ದೊರೆಯುವಂತೆ ಈ ಇಲಾಖೆಯು ಶ್ರಮಿಸುತ್ತಿದೆ.

- ರಾಜ್ಯದ ರೈತರು ಬೆಲೆ ಕುಸಿತದ ಸಂದರ್ಭದಲ್ಲಿ ಹತಾಶರಾಗಿ ತಮ್ಮ ಕೃಷಿ/ತೋಟಗಾರಿಕೆ ಉತ್ಪನ್ನಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡುವುದನ್ನು ತಡೆಯುವ ದೃಷ್ಟಿಯಿಂದ **ಕನಿಷ್ಠ ಬೆಂಬಲ ಬೆಲೆ** ಯೋಜನೆಯನ್ನು ಜಾರಿಗೆ ತರಲಾಗಿದೆ.

- ೧೮ ಕೃಷಿ ಮಾರುಕಟ್ಟೆಗಳಲ್ಲಿ **ಆನ್‌ಲೈನ್ ಟ್ರೇಡಿಂಗ್ ವ್ಯವಸ್ಥೆ**ಯನ್ನು ಜಾರಿಗೊಳಿಸಲಾಗಿದೆ. ರೈತ ಸಂಜೀವಿನಿ ಯೋಜನೆಯಡಿ ಹಾಗೂ ಆಮ್ ಆದ್ಮಿ ವಿಮಾ ಯೋಜನೆಯಡಿ ರೈತರಿಗೆ ಹಾಗೂ ಶ್ರಮಿಕ ಕುಟುಂಬಗಳಿಗೆ ವಿಮಾ ಪರಿಹಾರವನ್ನು ನೀಡಲಾಗುತ್ತಿದೆ.

### ಊ) ರೇಷ್ಮೆ ಇಲಾಖೆ:

- ರೇಷ್ಮೆ ಇಲಾಖೆಯು ರೇಷ್ಮೆ ಬೆಳೆಗಾರರಿಗೆ ಅನೇಕ ಸೌಲಭ್ಯಗಳನ್ನು ಒದಗಿಸುತ್ತಿದೆ.

- ಈ ಇಲಾಖೆಯು ಒದಗಿಸುತ್ತಿರುವ ಸೌಲಭ್ಯಗಳಲ್ಲಿ ಪ್ರಮುಖವಾದವುಗಳನ್ನು ಮುಂದೆ ನಿರೂಪಿಸಲಾಗಿದೆ: 1. ಹಿಪ್ಪು ನೇರಳೆ ನಾಟಿಗಾಗಿ ಎಕರೆಗೆ ರೂ.10500-11200, ಹನಿ ನೀರಾವರಿ ಅಳವಡಿಕೆಗಾಗಿ ಹೆಕ್ಟೇರ್‌ಗೆ ರೂ.88738 ಸಹಾಯಧನ, ರೇಷ್ಮೆ ಹುಳು ಸಾಕಾಣಿಕಾ ಮನೆಗಾಗಿ (ವಿವಿಧ ಅಳತೆಯ) ರೂ.21000-96250 ಸಹಾಯಧನ, ರೇಷ್ಮೆ ಹುಳು ಸಾಕಾಣಿಕಾ ಸಲಕರಣೆಗಳಿಗಾಗಿ ರೂ.18750-20000 ಸಹಾಯಧನ, ರೇಷ್ಮೆ ಸಂರಕ್ಷಣಾ ಪದ್ಧತಿ ಹಾಗೂ ಗುಣಾತ್ಮಕ ಸೊಂಕು ನಿವಾರಕಗಳ ಸರಬರಾಜಿಗೆ ರೂ.3750 ಸಹಾಯಧನ, ಚಾಕಿ ತೋಟ ನಿರ್ವಹಣೆ, ಚಾಕಿ ಹುಳು ಸಾಕಾಣಿಕೆ ಕಟ್ಟಡ ನಿರ್ಮಾಣ ಹಾಗೂ ಚಾಕಿ ಸಲಕರಣೆಗಳಿಗಾಗಿ ರೂ.4.50 ಲಕ್ಷ ಸಹಾಯಧನ, ಜೈವಿಕ ಉತ್ಪಾದನಾ ಘಟಕಕ್ಕಾಗಿ ರೂ.1.05 ಲಕ್ಷ ಸಹಾಯಧನ, ಮನೆ ಬಾಗಿಲ ಸೇವೆ, ರೇಷ್ಮೆ ಪಾಲಿಕ್ಲಿನಿಕ್ ಸ್ಥಾಪನೆ, ಖಾಸಗಿ ಬಿತ್ತನೆ ಕೋಠಿಗಳಿಗೆ ಆವರ್ತನಿಧಿ ಹಿಪ್ಪು ನೇರಳೆ ನರ್ಸರಿ ಬೆಳೆಸುವ ರೈತರಿಗೆ ಎಕರೆಗೆ ರೂ.7500 ಸಹಾಯಧನ, ಮಳೆಯಾಶ್ರಿತ ಹಿಪ್ಪು ನೇರಳೆ ವ್ಯವಸಾಯಕ್ಕೆ ಎಕರೆಗೆ ರೂ.7500 ಸಹಾಯಧನ, ರೇಷ್ಮೆ ಸಂಪನ್ಮೂಲ ಸ್ಥಾಪನೆ, ರೇಷ್ಮೆ ಬೆಳೆಗಾರರಿಗೆ ತರಬೇತಿ ಇತ್ಯಾದಿ.

### ಋ) ಸಾಮಾಜಿಕ ಅರಣ್ಯ:

- ವನ್ಯ ಪ್ರಾಣಿಗಳ ಹಾವಳಿಯಿಂದ ಉಂಟಾಗುವ ಬೆಳೆ ನಾಶ, ಮಾನವ ಪ್ರಾಣಹಾನಿ, ಶಾಶ್ವತ ಅಂಗ ವಿಕಲತೆ, ಗಾಯಗೊಂಡವರಿಗೆ ಹಾಗೂ ಆಸ್ತಿಪಾಸ್ತಿ ನಷ್ಟಕ್ಕೆ ಸಂಬಂಧಿಸಿದಂತೆ ಅರಣ್ಯ ಇಲಾಖೆಯು ಪರಿಹಾರ ಮೊತ್ತವನ್ನು ನಿಗದಿಪಡಿಸಿದ್ದು, ಆ ಪ್ರಕಾರವಾಗಿ ಸಂದರ್ಭಕ್ಕನುಗುಣವಾಗಿ ಪರಿಹಾರವನ್ನು ವಿತರಿಸುತ್ತದೆ.

- ಅರಣ್ಯದಂಚಿನಲ್ಲಿ ಬರುವಂತಹ ಹಿಡುವಳಿ ಜಮೀನುಗಳ ರೈತರು ಬೆಳೆದ ಬೆಳೆಗಳನ್ನು ವನ್ಯ ಪ್ರಾಣಿಗಳ ದಾಳಿಯಿಂದ ರಕ್ಷಿಸಲು ಹಾಗೂ ರೈತರಿಗೆ ಆರ್ಥಿಕವಾಗಿ ಸಹಾಯ ಮಾಡಲು ಅರಣ್ಯ ಇಲಾಖೆಯು ಗ್ರಾಮಸ್ಥರ ಸಹಯೋಗದೊಂದಿಗೆ ಸೌರಶಕ್ತಿ ಬೇಲಿಯನ್ನು ನಿರ್ಮಾಣ ಮಾಡುವ ಹೊಸ ಯೋಜನೆಯೊಂದು ಅನುಷ್ಠಾನಗೊಳ್ಳುತ್ತಲಿದೆ.

- ಕೃಷಿ ಅರಣ್ಯ ಯೋಜನೆಯಡಿ ಕೃಷಿಕರಿಗೆ ಮತ್ತು ಸಾರ್ವಜನಿಕರಿಗೆ ತಮ್ಮ ಖಾಸಗಿ ಜಮೀನುಗಳಲ್ಲಿ ನೆಡುವ ಸಲುವಾಗಿ ಅರಣ್ಯ ಸಸಿಗಳನ್ನು ವಿತರಿಸಲಾಗುತ್ತಿದೆ. ಪ್ರತಿ ಬದುಕುಳಿದ ಸಸಿಗೆ ಸರ್ಕಾರದಿಂದ ಪ್ರೋತ್ಸಾಹಧನ ಕೊಡುವುದಲ್ಲದೇ ಬೆಳೆದ ಮರಗಳಿಂದ ಬಂದ ಉತ್ಪನ್ನಗಳನ್ನು ಫಲಾನುಭವಿಗಳೇ ಉಪಯೋಗಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

### ಎ) ಮೀನುಗಾರಿಕೆ ಇಲಾಖೆ:

- ರಾಜ್ಯದಲ್ಲಿ ಮೀನುಗಾರಿಕೆಯು ಆಹಾರ ಉತ್ಪಾದನೆ ಹಾಗೂ ವಿದೇಶಿ ವಿನಿಮಯ ಗಳಿಕೆಯ ಚಟುವಟಿಕೆಗಳಲ್ಲಿ ಪ್ರಮುಖವಾದ ಉದ್ಯಮವಾಗಿ ಬೆಳೆದಿರುತ್ತದೆ. ಮೀನು ಉತ್ತಮ ಪೌಷ್ಠಿಕ ಆಹಾರಗಳಲ್ಲಿ ಒಂದಾಗಿದ್ದು, ಮೀನಿನ ಬಳಕೆಯು ಗ್ರಾಮೀಣ ಜನತೆಯ ಅಪೌಷ್ಠಿಕತೆಯನ್ನು ಹೋಗಲಾಡಿಸಲು ನೆರವಾಗುತ್ತದೆ.

- ಈ ಇಲಾಖೆಯು ಎಲ್ಲಾ ಲಭ್ಯ ಹಾಗೂ ಯೋಗ್ಯ ಜಲ ಸಂಪನ್ಮೂಲಗಳನ್ನು ಬಳಸಿ ಮೀನು ಉತ್ಪಾದನೆಯನ್ನು ಹೆಚ್ಚಿಸುತ್ತದೆ. ಕರಾವಳಿ ವಲಯದಲ್ಲಿ ಸುಸ್ಥಿರ ಕಡಲು ಮೀನು ಉತ್ಪಾದನೆಗೆ ಅವಶ್ಯವಾದ ನಿರ್ವಹಣಾ ಕ್ರಮಗಳ ಅಳವಡಿಕೆಯ ಬಗ್ಗೆ ಮೀನುಗಾರರಿಗೆ ಅರಿವು ಮೂಡಿಸುತ್ತದೆ. ಕರಾವಳಿ ಮತ್ತು ಒಳನಾಡು ಮೀನು ಹಿಡುವಳಿ, ಸಂರಕ್ಷಣೆ, ಸಂಸ್ಕರಣೆ ಹಾಗೂ ಮಾರಾಟಕ್ಕಾಗಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಿರ್ವಹಣೆಯನ್ನು ಮಾಡುತ್ತದೆ.

- ಒಳನಾಡಿನಲ್ಲಿ ಮೀನು ಮರಿ ಉತ್ಪಾದನೆ ಮೀನು ಕೃಷಿಗೆ ನವೀನ ತಾಂತ್ರಿಕತೆಗಳನ್ನು ಅಳವಡಿಸುವುದು, ಮೀನು ಮಾರಾಟ ವ್ಯವಸ್ಥೆಯಲ್ಲಿ ಸುಧಾರಣೆ ತರುವುದು, ಮೀನು ಕೃಷಿಕರಿಗೆ ವೈಜ್ಞಾನಿಕ ಮತ್ತು ವಿಸ್ತರಣಾ ಸೇವೆಗಳನ್ನು ಒದಗಿಸುವುದು ಮತ್ತು ಮೀನುಗಾರರ ಸಮುದಾಯದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗಳಲ್ಲಿ ಸುಧಾರಣೆ ತರುವ ಕಾರ್ಯಗಳನ್ನು ಈ ಇಲಾಖೆಯು ಮಾಡುತ್ತಿದೆ.

- ವಿವಿಧ ತಳಿ ಮೀನು ಮರಿಗಳ ದರ (ಪ್ರತಿ ಸಾವಿರ ಮರಿಗಳಿಗೆ) ಕಾಟ್ಲಾ ರೂ.258/-, ಹುಲ್ಲುಗೆಂಡೆ ರೂ.400/, ರೋಹು ರೂ.240/-, ಸಾಮಾನ್ಯಗೆಂಡೆ ರೂ.200/- ಆಗಿರುತ್ತದೆ. ಒಳನಾಡು ಮೀನುಗಾರಿಕೆಯಲ್ಲಿ ತೊಡಗಿರುವ ಪರಿಶಿಷ್ಟ ಜಾತಿ ಮತ್ತು ಪಂಗಡ ಮೀನು ಕೃಷಿಕರಿಗೆ ಐದು ಸಾವಿರ ರೂಗಳ ಮೀನುಗಾರಿಕೆ ಸಲಕರಣೆಗಳನ್ನು ಉಚಿತವಾಗಿ ನೀಡಲಾಗುವುದು.

- ಮೀನನ್ನು ತಾಜಾ ಸ್ಥಿತಿಯಲ್ಲಿ, ಶಾಖ ನಿರೋಧಕ ಪೆಟ್ಟಿಗೆಯಲ್ಲಿ ಮೀನು ಇಳಿದಾಣಗಳಿಂದ ತ್ವರಿತವಾಗಿ ಗ್ರಾಹಕರಿಗೆ ತಲುಪಿಸಲು ಮೀನು ಮಾರಾಟ ವಾಹನಗಳನ್ನು ಒದಗಿಸಲಾಗುತ್ತದೆ. ತ್ರಿಚಕ್ರ ವಾಹನಗಳನ್ನು (ವಾಹನದ ವೆಚ್ಚ ರೂ.1.2 ಲಕ್ಷ) ವಾಹನದ ಬೆಲೆಯ ಶೇ.25 ರಷ್ಟು ಅಥವಾ ಗರಿಷ್ಠ ರೂ.30,000 ಸಹಾಯಧಾನದೊಂದಿಗೆ ವಿತರಿಸಲಾಗುವುದು. ಇದೇ ರೀತಿ ನಾಲ್ಕು ಚಕ್ರದ ವಾಹನಗಳಿಗೆ (ವಾಹನದ ಬೆಲೆ ರೂ.2.0 ಲಕ್ಷ) ವಾಹನದ ಬೆಲೆಯ ಶೇ.25 ರಷ್ಟು ಅಥವಾ ಗರಿಷ್ಠ ರೂ.35,000 ಸಹಾಯಾನುಧಾನದೊಂದಿಗೆ ವಿತರಿಸಲಾಗುವುದು.

- ಮೀನು ಮಾರುಕಟ್ಟೆ ನಿರ್ಮಾಣ/ಪುನರ್ ನಿರ್ಮಾಣಕ್ಕಾಗಿ ಗ್ರಾಮ ಪಂಚಾಯಿತಿಗಳಿಗೆ 33,000 ರೂಗಳ ಸಹಾಯಧನವನ್ನು ನೀಡಲಾಗುವುದು. ವಿವಿಧ ಮೊತ್ತವನ್ನು ಗ್ರಾಮ ಪಂಚಾಯಿತಿಗಳೇ ಭರಿಸಬೇಕಾಗುತ್ತದೆ.

- ಸಾಂಪ್ರದಾಯಕ ಮೀನುಗಾರಿಕಾ ದೋಣಿಗಳಿಗೆ ಮೋಟಾರಿಕರಣ ಮಾಡಲು ಸಹಾಯಧನವನ್ನು ನೀಡಲಾಗುತ್ತದೆ. ನಾಡ ದೋಣಿಗಳಿಗೆ 10 ಅಶ್ವ ಶಕ್ತಿಗಿಂತ ಕಡಿಮೆಯಿರುವ ಸೀಮೆಎಣ್ಣೆಯಿಂದ ಚಲಿಸುವ ಔಟ್‌ಬೋರ್ಡ್ ಇಂಜಿನ್

ಖರೀದಿಸಿ ಅಳವಡಿಸಿಕೊಳ್ಳಲು ವೆಚ್ಚದ ಶೇ.50 ರಷ್ಟು ಅಂದರೆ, ಗರಿಷ್ಠ ರೂ.30,000 ಗಳನ್ನು ಸಹಾಯಧನವಾಗಿ ನೀಡಲಾಗುತ್ತದೆ.

- ಯಾಂತ್ರೀಕೃತ ಮೀನುಗಾರಿಕೆಯನ್ನು ಲಾಭದಾಯಕಗೊಳಿಸಲು ಇಲಾಖೆಯಿಂದ ನೊಂದಾಯಿತ ಪಾಸು, ಪುಸ್ತಕವನ್ನು ಪಡೆದ ದೋಣಿ ಮಾಲಿಕರ ಯಾಂತ್ರೀಕೃತ ದೋಣಿಗಳಿಗೆ ಪ್ರತಿ ಲೀ. ಡೀಸೆಲ್ ಮೇಲೆ 8 ರೂಗಳಷ್ಟು ನೆರವು ನೀಡಲಾಗುತ್ತಿದೆ. ಈ ನೆರವನ್ನು ದೋಣಿ ಮಾಲಿಕರ ಖಾತೆಗೆ ನೇರವಾಗಿ ವರ್ಗಾಯಿಸಲಾಗುತ್ತದೆ.

- ಮೀನುಗಾರಿಕೆ ನಿಷೇಧಿಸಿರುವ ಅವಧಿಯಲ್ಲಿ ಮೀನುಗಾರರಿಗೆ ಉಪಯೋಗವಾಗಲೆಂದು ಮೀನುಗಾರಿಕಾ ಋತುವಿನ 9 ತಿಂಗಳಲ್ಲಿ ಅಂದರೆ, ಸೆಪ್ಟೆಂಬರ್‌ನಿಂದ ಮೇವರೆಗೆ ಪ್ರತಿ ತಿಂಗಳು ರೂ.100 ರಂತೆ ಒಟ್ಟು 900 ರೂಗಳನ್ನು ಉಳಿತಾಯ ಮಾಡಿದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ತಮ್ಮ ಪಾಲಿನ ಬಾಬ್ತು ರೂ.1800 ನ್ನು ಸೇರಿಸಿ ಒಟ್ಟು ಮೊತ್ತ 2700 ರನ್ನು ಪಾವತಿ ಮಾಡಲಾಗುತ್ತದೆ.

- ಮೀನುಗಾರರು ಮೀನುಗಾರಿಕೆಯಲ್ಲಿ ನಿರತರಾಗಿದ್ದಾಗ ಪ್ರಕೃತಿ ವಿಕೋಪಕ್ಕೆ ಗುರಿಯಾಗಿ ಮರಣ ಹೊಂದಿದ್ದಲ್ಲಿ ಅಥವಾ ಪೂರ್ಣ ಅಂಗವಿಕಲರಾಗಿದ್ದಲ್ಲಿ ಅಂತವರ ಕುಟುಂಬಕ್ಕೆ 2.00 ಲಕ್ಷ ರೂಗಳ ವಿಮಾ ಮೊತ್ತವನ್ನು ಹಾಗೂ ಭಾಗಶಃ ಅಂಗವಿಕಲರಾದವರಿಗೆ ರೂ.1.00 ಲಕ್ಷ ಪರಿಹಾರವನ್ನು ನೀಡಲಾಗುವುದು.

- ಮೀನುಗಾರ ಮಹಿಳೆಯರ ಅನುಕೂಲಕ್ಕಾಗಿ ಪ್ರತಿ ಮೀನುಗಾರ ಮಹಿಳೆಗೆ ಮೀನು ಮಾರಾಟ, ಮೀನು ಒಣಗಿಸುವುದು, ಮೀನಿನ ಖಾದ್ಯಗಳ ತಯಾರಿ ಇವೆ ಮೊದಲಾದ ಚಟುವಟಿಕೆಗಳಿಗೆ ಸಹಾಯ ಮಾಡಲು ಸ್ವಸಹಾಯ ಗುಂಪಿಗೆ ದುಡಿಯುವ ಬಂಡವಾಳವಾಗಿ 2.00 ಲಕ್ಷ ರೂಗಳ ಆವರ್ತಕನಿಧಿಯನ್ನು ನೀಡಿದ್ದು, ಇದರ ಮೂಲಕ ಸಹಕಾರ ಸಂಘದ ಸದಸ್ಯ ಗುಂಪಗಳಿಗೆ 50,000 ರೂಗಳಂತೆ ನೆರವು ನೀಡಲಾಗುತ್ತಿದೆ.

- ಮನೆಯ ಅಥವಾ ಸ್ವಂತ ನಿವೇಶನ ಇಲ್ಲದಿರುವ ಬಡ ಮೀನುಗಾರರಿಗೆ ಮನೆ ನಿರ್ಮಾಣಕ್ಕಾಗಿ ತಲಾ 1.20 ಲಕ್ಷಗಳನ್ನು ಮತ್ತು ಗ್ರಾಮಾಂತರ ಪ್ರದೇಶದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೀನುಗಾರರಿಗೆ 1.5 ಲಕ್ಷ ರೂಗಳನ್ನು ಹಾಗೂ ನಗರ ಪ್ರದೇಶದಲ್ಲಿನ ಪರಿಶಿಷ್ಟ ಜಾತಿ ಹಾಗೂ ಪಂಗಡ ಮೀನುಗಾರರಿಗೆ 1. 80 ಲಕ್ಷಗಳ ನೆರವನ್ನು ನೀಡಲಾಗುತ್ತದೆ.

- ಒಳನಾಡು/ಹಿನ್ನೀರು ಪ್ರದೇಶದಲ್ಲಿ ಮೀನುಗಾರಿಕೆಯಲ್ಲಿ ನಿರತರಾಗಿರುವ ಆರ್ಥಿಕವಾಗಿ ಹಿಂದುಳಿದ ಮೀನುಗಾರರಿಗೆ 10,000 ರೂಗಳ ಮೌಲ್ಯದ ಬಲೆ ಇತ್ಯಾದಿ ಮೀನುಗಾರಿಕೆ ಸಲಕರಣೆಗಳನ್ನು ಒದಗಿಸಲಾಗುತ್ತಿದೆ.

- ಕರಾವಳಿ ಹಾಗೂ ಒಳನಾಡು ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಮೀನುಗಾರರಿಗೆ ವಿಶೇಷ ಘಟಕ ಹಾಗೂ ಬುಡಕಟ್ಟು ಉಪಯೋಜನೆಗಳ ಮೂಲಕ ಸಹಾಯಧನವನ್ನು ನೀಡಲಾಗುತ್ತಿದೆ.

- ಅಂತರ್ವರ್ತಿ ದೋಣೀಗಳ ಅಳವಡಿಕೆಗಾಗಿ ಮೀನುಗಾರರಿಗೆ 6.00 ಲಕ್ಷ ರೂಗಳ ಸಹಾಯಧನವನ್ನು ನೀಡಲಾಗುತ್ತಿದೆ.


- ಮಂಜುಗಡ್ಡೆ ಸ್ಥಾವರ ಉಪಯೋಗಿಸುವ ವಿದ್ಯುತ್ ಮೇಲೆ ಪ್ರತಿ ಯೂನಿಟ್‌ಗೆ ರೂ.1.50 ಯಂತೆ ಗರಿಷ್ಠ 3.00 ಲಕ್ಷ ರೂಗಳ ಸಹಾಯಧನ ನೀಡಲಾಗುತ್ತಿದೆ.

## ೯. ಕೃಷಿ ವಿಜ್ಞಾನ ಕೇಂದ್ರ (KVK) ಗಳ ಪಾತ್ರ

ಕೃಷಿ ವಿಜ್ಞಾನ ಕೇಂದ್ರಗಳು ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ಅಂಗ ಸಂಸ್ಥೆಗಳಾಗಿವೆ. ಕರ್ನಾಟಕದಲ್ಲಿ ಹೆಚ್ಚಿನ ಕೃಷಿ ವಿಜ್ಞಾನ ಕೇಂದ್ರಗಳು ಕೃಷಿ ಹಾಗೂ ತೋಟಗಾರಿಕೆ ವಿಶ್ವವಿದ್ಯಾನಿಲಯಗಳ ವ್ಯಾಪ್ತಿಗೆ ಒಳಪಟ್ಟಿವೆ. ರಾಜ್ಯದಲ್ಲಿ ಪ್ರತಿ ಜಿಲ್ಲೆಗೆ ಕನಿಷ್ಟ ಒಂದರಂತೆ ಕೃಷಿ ವಿಜ್ಞಾನ ಕೇಂದ್ರಗಳಿವೆ.

- ಈ ಕೇಂದ್ರಗಳ ವ್ಯಾಪ್ತಿಗೆ ಬರುವ ರೈತ ಸಮುದಾಯದ ತರಬೇತಿ ಅಗತ್ಯತೆಗಳನ್ನು ಗಮನಲ್ಲಿಟ್ಟುಕೊಂಡು ಇವುಗಳು ಆ ಪ್ರದೇಶದ ಸಮೀಕ್ಷೆಯನ್ನು ನಡೆಸಿ ಸಂಪನ್ಮೂಲಗಳ ಪಟ್ಟಿಯನ್ನು ಮಾಡುತ್ತವೆ.
- ವಿವಿಧ ರೈತ ವರ್ಗಗಳಿಗೆ ಅದರಲ್ಲೂ ವಿಶೇಷವಾಗಿ ಆರ್ಥಿಕವಾಗಿ ಹಿಂದುಳಿದ ಮತ್ತು ಮಹಿಳಾ ರೈತರ ಅಗತ್ಯತೆಗಳನ್ನು ಗಮನದಲ್ಲಿಟ್ಟುಕೊಂಡು ಉತ್ಪಾದನೆಯನ್ನು ಹೆಚ್ಚಿಸುವ ತಂತ್ರಜ್ಞಾನದ ವರ್ಗಾವಣೆಗಾಗಿ ಅಲ್ಪಾವಧಿ ಮತ್ತು ದೀರ್ಘಾವಧಿ ತರಬೇತಿಗಳನ್ನು ರೂಪಿಸುತ್ತದೆ ಮತ್ತು ನಡೆಸುತ್ತದೆ– ಕೇಂದ್ರಗಳಲ್ಲಿ ಮತ್ತು ಗ್ರಾಮಗಳಲ್ಲಿ.
- ತರಬೇತಿಗಳ ಪಠ್ಯವನ್ನು ಬೆಂಬಲಿಸುವುದಕ್ಕಾಗಿ ಅನೌಪಚಾರಿಕ ಶಿಕ್ಷಣವನ್ನು ಅಂದರೆ, ಕ್ಷೇತ್ರೋತ್ಸವಗಳು, ಕ್ಷೇತ್ರ ಭೇಟಿಗಳು, ರೈತರ ಜಾತ್ರೆಗಳು, ಆಕಾಶವಾಣಿಯಲ್ಲಿ ಸಂವಾದ, ರೈತ ವಿಜ್ಞಾನ ಕ್ಲಬ್‌ಗಳು ಇತ್ಯಾದಿಗಳನ್ನು ಉಪಯೋಗಿಸಿಕೊಳ್ಳಲಾಗುತ್ತದೆ.
- ಯುವ ಸಮುದಾಯದ ಆಸಕ್ತಿಯನ್ನು ಕೃಷಿ ಹಾಗೂ ಸಂಬಂಧಿತ ಉದ್ದಿಮೆಗಳ ಕಡೆಗೆ ಸೆಳೆಯುವುದಕ್ಕಾಗಿ ಗ್ರಾಮಗಳಲ್ಲಿ ಹಾಗೂ ಗ್ರಾಮೀಣ ಶಾಲೆಗಳಲ್ಲಿ ಕೃಷಿ ವಿಜ್ಞಾನ ಕ್ಲಬ್‌ಗಳನ್ನು ಸ್ಥಾಪಿಸಿ ಅವುಗಳ ಉಸ್ತುವಾರಿ ಮಾಡಲಾಗುತ್ತದೆ.
- ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ಆಧುನಿಕ ಕೃಷಿ ತಂತ್ರಜ್ಞಾನವನ್ನು ಬಳಸಿ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸಲಾಗುತ್ತದೆ ಮತ್ತು ಈ ಪ್ರಾತ್ಯಕ್ಷಿಕೆಗಳನ್ನು ತರಬೇತಿಗೆ ಬಂದಿರುವ ರೈತರಿಗೆ ಪ್ರತ್ಯಕ್ಷ ನಿರೂಪಣಾ ಕಾರ್ಯಕ್ಕಾಗಿ ಉಪಯೋಗಿಸಲಾಗುತ್ತದೆ.
- ಗ್ರಾಮೀಣ ಪ್ರೌಢಶಾಲೆಗಳಲ್ಲಿ ಬೋಧಿಸುವ ಕೃಷಿ ಪಠ್ಯವನ್ನು ಅಭ್ಯಸಿಸುವ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ತರಬೇತಿಯನ್ನು ಪಡೆಯಲು ಈ ಕೇಂದ್ರಗಳು ಅನುವು ಮಾಡಿಕೊಡುತ್ತವೆ.
- ಗ್ರಾಮೀಣ ಅನಕ್ಷರಸ್ಥ ರೈತರಿಗೆ ಮತ್ತು ಕಡಿಮೆ ಓದಿದ ರೈತರಿಗೆ ಸಾಮಾನ್ಯ ಶಿಕ್ಷಣವನ್ನು ನೀಡಿ ಅವರು ಉತ್ತಮ ರೈತರಾಗುವುದೇ ಅಲ್ಲದೇ, ಉತ್ತಮ ನಾಗರಿಕರಾಗುವಂತೆ ಈ ಕೇಂದ್ರಗಳು ಸಹಕರಿಸುತ್ತವೆ.
- ಗ್ರಾಮೀಣ ಸಮುದಾಯದಲ್ಲಿ ಮನೆ ನಿರ್ವಹಣೆ ಹಾಗೂ ಪೋಷಕಾಂಶ ಶಿಕ್ಷಣದ ಬಗ್ಗೆ ಹೆಚ್ಚಿನ ತರಬೇತಿ ಸೌಲಭ್ಯಗಳನ್ನು ಒದಗಿಸುತ್ತವೆ. ಈ ತರಬೇತಿ ಸೌಲಭ್ಯವನ್ನು ಕ್ರಮೇಣವಾಗಿ ಕುಟುಂಬ ಕಲೆಗಳು, ಗುಡಿಕೈಗಾರಿಕೆ ಇತ್ಯಾದಿಗಳಿಗೆ ವಿಸ್ತರಿಸಿ ಸಂಬಂಧಿತ ಸಂಸ್ಥೆಗಳ ಒಡಗೂಡಿ ಸಮಗ್ರ ಗ್ರಾಮೀಣ ಅಭಿವೃದ್ಧಿಯ ಅಗತ್ಯತೆಗಳನ್ನು ಪೂರೈಸುತ್ತವೆ.
- ಈ ಕೇಂದ್ರಗಳ ತರಬೇತಿ ಕಾರ್ಯಕ್ರಮಗಳನ್ನು ಬಲಪಡಿಸಿಕೊಳ್ಳುವುದಕ್ಕಾಗಿ ಐಸಿಎಆರ್ ಹಾಗೂ ಸಂಬಂಧಿತ ಇತರೆ ಸಂಸ್ಥೆಗಳ ಕಾರ್ಯಕ್ರಮಗಳನ್ನೂ ಸಹ ಅನುಷ್ಠಾನಗೊಳಿಸುವುದು.
- ಕೃಷಿ ವಿಜ್ಞಾನ ಕೇಂದ್ರಗಳು ಗ್ರಾಮೀಣ ಅಭಿವೃದ್ಧಿಯನ್ನು ನಿರ್ದಿಷ್ಟವಾಗಿ ಗುರಿಯಾಗಿಟ್ಟುಕೊಂಡು ಕರ್ತವ್ಯ ನಿರ್ವಹಿಸುವ ಸಂಸ್ಥೆಗಳಾಗಿದ್ದು, ಈ ಕೇಂದ್ರಗಳಿಂದ ಕೃಷಿ ಹಾಗೂ ಸಂಬಂಧಿತ ಉದ್ದಿಮೆಗಳ ಅಭಿವೃದ್ಧಿಯನ್ನಷ್ಟೇ ಅಲ್ಲದೇ, ರೈತರ ಆದಾಯ ಮತ್ತು ಕಲ್ಯಾಣ ವೃದ್ಧಿಯನ್ನೂ ಸಹ ಬಹುಮಟ್ಟಿಗೆ ನಿರೀಕ್ಷಿಸಬಹುದಾಗಿದೆ.

## ಸರ್ಕಾರಿ ಆದೇಶ ಕೃಇ 61 ಕೃಎಇ 2013, ಬೆಂಗಳೂರು, ದಿನಾಂಕ 31.01.2014ರ ಅನ್ವಯ ರಚಿಸಲಾಗಿರುವ ಕರ್ನಾಟಕ ಕೃಷಿ ಬೆಲೆ ಆಯೋಗದ ಕಾರ್ಯಜಾಲ



ಕರ್ನಾಟಕ ಸರ್ಕಾರ

# ಕರ್ನಾಟಕ ಕೃಷಿ ಬೆಲೆ ಆಯೋಗ

## (Karnataka Agriculture Price Commission)

(ಆದೇಶ ಸಂಖ್ಯೆ: ಕೃಇ61ಕೃಎಇ2013, ಬೆಂಗಳೂರು, ದಿ: 31/01/2014)

ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳು 2013-14ನೇ ಸಾಲಿನ ಆಯವ್ಯಯ ಭಾಷಣದ ಪ್ರಸ್ತಾಪದನ್ವಯ, ಸರ್ಕಾರದ ಆದೇಶ ಸಂಖ್ಯೆ: ಕೃಎ61ಕೃಎಇ2013, ಬೆಂಗಳೂರು, ದಿ:31/01/2014 ರಂತೆ 10 ಷರತ್ತು ಮತ್ತು ನಿಬಂಧನೆ, 10 ಕರ್ತವ್ಯ ಹಾಗೂ ರಚನೆಗಳಂತೆ ಓರ್ವ ಅಧ್ಯಕ್ಷರು ಮತ್ತು ಐವರು ಸದಸ್ಯರಿರುವ ಕರ್ನಾಟಕ ಕೃಷಿ ಬೆಲೆ ಆಯೋಗ'ವನ್ನು ರಚಿಸಲಾಯಿತು.

**ದೃಷ್ಟಿಕೋನ:**

ರೈತರಿಗೆ ಗ್ರಾಹಕರ ಬೆಲೆಯಲ್ಲಿ ಗರಿಷ್ಠ ಪಾಲು ಖಚಿತ ಪಡಿಸುವುದು, ರಾಜ್ಯದ ಕೃಷಿ ಕ್ಷೇತ್ರದಲ್ಲಿ ಸುಸ್ಥಿರ ಅಭಿವೃದ್ಧಿ ಸಾಧನೆ, ಆಹಾರ ಭದ್ರತಾ ಅಗತ್ಯಗಳ ಪೂರೈಕೆ, ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ಮತ್ತು ಸೂಕ್ತ ಮಾರುಕಟ್ಟೆ ವ್ಯವಸ್ಥೆಯನ್ನು ಕಲ್ಪಿಸುವುದು ಇತ್ಯಾದಿ ಕರ್ನಾಟಕ ರಾಜ್ಯದ ಕೃಷಿ ಬೆಲೆ ಆಯೋಗದ ಮುಖ್ಯ ದೃಷ್ಟಿಕೋನವಾಗಿರುತ್ತದೆ.

**ಧ್ಯೇಯೊದ್ದೇಶಗಳು:**

ಕೃಷಿ ಮಾರುಕಟ್ಟೆಯ ಮೂಲ ಸೌಕರ್ಯವನ್ನು ಉತ್ತಮಗೊಳಿಸುವುದು, ಬೆಲೆ ಮತ್ತು ಬೆಲೆಯೇತರ ಕ್ರಮಗಳಿಂದ ಮಾರುಕಟ್ಟೆ ಸ್ಥಿರೀಕರಿಸುವುದು, ಅಧಿಕ ಉತ್ಪಾದನೆ ಸಮಯದಲ್ಲಿ 'ಮಾರುಕಟ್ಟೆ ಮಧ್ಯಪ್ರವೇಶ', ರೈತರಿಗೆ ಲಾಭದಾಯಕ ಬೆಲೆ ಪಡೆಯುವುದಕ್ಕಾಗಿ ಸಾಮೂಹಿಕ ಚೌಕಾಸಿ ಸಾಮರ್ಥ್ಯ (Collective Bargaining Power) ಹೆಚ್ಚಿಸುವುದು, ಮಾರುಕಟ್ಟೆ ಸುಧಾರಣೆ, ಬೆಳೆ ವಿಮೆ, ಇ-ವ್ಯಾಪಾರಗಳ ಮೂಲಕ ಕೃಷಿ ಸಮುದಾಯದ ಎಲ್ಲಾ ವರ್ಗ ಮತ್ತು ಪ್ರದೇಶಗಳ ರೈತರ ಹಿತ ಕಾಪಾಡುವುದು ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ.


**ಕೃಷಿ ಆಯುಕ್ತರ ಕಾರ್ಯಾಲಯ ಆವರಣ**

**ಶೇಷಾದ್ರಿ ರಸ್ತೆ, ಬೆಂಗಳೂರು – 560 001**

**ಫೋನ್: 080-22115496**

**ಇ-ಮೇಲ್: agripricecommission@gmail.com**

**ಜಾಲತಾಣ: www.kapricom.org**


Design by dataworx: www.dataworx.co.in